02 August 2026 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂದು ತಿಳಿದು ನಡೆದರೆ ಮಾತ್ರ, ಸ್ವಾರ್ಥ, ಕೆಟ್ಟತನದ ಹಾದಿಯಲ್ಲಿ ಹೆಜ್ಜೆ ಹಾಕುವದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಮೇಕೆದಾಟು ವಿಚಾರ ಸುಪ್ರೀಂನಲ್ಲಿ ಜಯ: ಹೋರಾಟ ಕೈಬಿಡಿ ಪುಟ ಸಂ. 2



ಸಂಕಷ್ಟದ ಸಮಯದಲ್ಲಿ ನೆರವಾದ ಕಬಿನಿ: ತಡವಾಗಿ ಭರ್ತಿ ಪುಟ ಸಂ. 3



ಸಿಡಬ್ಲ್ಯೂಆರ್‌ಸಿ ಆದೇಶ ಖಂಡಿಸಿ ರಸ್ತೆ ತಡೆ ನಡೆಸಿ ರೈತ ಸಮಿತಿ ಆಕ್ರೋಶ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 241 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಯುವಜನರಿಂದ ಭಾರತ ಮುಂಚೂಣಿಗೆ

## ಯುವಕರು ದೇಶದ ಅತಿದೊಡ್ಡ ಶಕ್ತಿ: ಪ್ರಧಾನಿ ಮೋದಿ ಅಭಿಪ್ರಾಯ

**ಮೈಸೂರು:** ಸ್ವಾಮಿ ವಿವೇಕಾನಂದರು ಕಂಡ ಭಾರತದ ಕನಸನ್ನು ಸಾಕಾರಗೊಳಿಸುವ ಹೊಣೆ ಇಂದಿನ ಯುವಜನರ ಮೇಲಿದೆ. ಯುವಜನರು ದೇಶದ ಅತಿದೊಡ್ಡ ಶಕ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ನಿರ್ಮಿಸಿರುವ ವಿವೇಕ ಸ್ಮಾರಕವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು. ಎಲ್ಲರಿಗೂ ನಮಸ್ಕಾರಗಳು ಎಂದು ಕನ್ನಡದಲ್ಲೇ ಶುಭಾಶಯ ಕೋರಿದ ಪ್ರಧಾನಿ, ಪ್ರಥಮವಾಗಿ ಚಾಮುಂಡೇಶ್ವರಿ ದೇವಿಗೆ ಪ್ರಣಾಮ ಸಲ್ಲಿಸುತ್ತೇನೆ ಎಂದರು.

ಉತ್ಪಾದನೆ, ತಂತ್ರಜ್ಞಾನ, ಸ್ಟಾರ್ಟ್‌ಅಪ್, ಅಂತರಿಕ್ಷ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಯುವಕರ ಸಾಧನೆಯೇ ಭಾರತವನ್ನು ವಿಶ್ವದ ಮುಂಚೂಣಿಗೆ ತರುತ್ತಿದೆ ಎಂದು ಮೋದಿ ಶ್ಲಾಘಿಸಿದರು. ಸ್ವಾಮಿ ವಿವೇಕಾನಂದರು ವಿಶ್ವಪರ್ಯಟನೆ ವೇಳೆ ವಿದೇಶಗಳ ಯುವಕರು ತಮ್ಮ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿರುವುದನ್ನು ಕಂಡಿದ್ದರು. ಅಂದು ಭಾರತ ಗುಲಾಮಗಿರಿಯಲ್ಲಿತ್ತು. ಆದರೆ ಇಂದು ಭಾರತದ ಯುವಕರು ತಮ್ಮ ಪ್ರತಿಭೆ ಮತ್ತು ಪರಿಶ್ರಮದಿಂದ ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತಿದ್ದಾರೆ ಎಂದು ಹೇಳಿದರು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಾತನಾಡಿದರು.







### ವಿವೇಕ ಸ್ಮಾರಕ ಉದ್ಘಾಟನೆ

**ಮೈಸೂರು:** ಸಾಂಸ್ಕೃತಿಕ ನಗರ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಆಗಮಿಸಿದರು. ರಾಮಕೃಷ್ಣ ಆಶ್ರಮದಿಂದ ನಿರ್ಮಿಸಿರುವ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ (ವಿವೇಕ ಸ್ಮಾರಕ)ವನ್ನು ಉದ್ಘಾಟಿಸಿದರು. ಬಳಿಕ ಆಶ್ರಮದಲ್ಲೇ ಕೆಲಹೊತ್ತು ಧ್ಯಾನ ಮಾಡಿದರು.

ರಾಮಕೃಷ್ಣ ಆಶ್ರಮದಿಂದ ಸುಮಾರು 45 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸ್ವಾಮಿ ವಿವೇಕಾನಂದ ಸ್ಮಾರಕ ಹಾಗೂ ಸಾಂಸ್ಕೃತಿಕ ಯುವ ಕೇಂದ್ರವನ್ನು ಪ್ರಧಾನಿ ಮೋದಿ ಶನಿವಾರ ಲೋಕಾರ್ಪಣೆ ಮಾಡಿದರು.

ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ಹೆಲಿಕಾಪ್ಟರ್ ಪುಟ 2ಕ್ಕೆ

### ಮೈಸೂರಿನ ಪರಂಪರೆಗೆ ದೇಶದಲ್ಲಿ ವಿಶೇಷ ಸ್ಥಾನ

ಮೈಸೂರು ಭಾರತದ ಅನಾದಿ ಸಾಂಸ್ಕೃತಿಕ ಕೇಂದ್ರವಾಗಿದೆ. ದಸರಾ, ಅರಮನೆ, ಸಂಗೀತ, ಸಾಹಿತ್ಯ, ಧಾರ್ಮಿಕ ಪರಂಪರೆ ದೇಶದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಸ್ವಾಮಿ ವಿವೇಕಾನಂದರ ಜೀವನದಲ್ಲೂ ಮೈಸೂರಿನ ಕೊಡುಗೆ ಮಹತ್ವದ್ದಾಗಿದೆ. ಯುವ ಸನ್ಯಾಸಿಯಾಗಿದ್ದಾಗ ಅವರಿಗೆ ಈ ನೆಲವೇ ದೊಡ್ಡ ಪ್ರೇರಣೆಯಾಯಿತು ಎಂದು ನರೇಂದ್ರ ಮೋದಿ ಹೇಳಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಯುವಶಕ್ತಿ, ಯುವ ಚಿಂತನೆ ಮತ್ತು ಯುವ ಆಲೋಚನೆಗಳೇ ಸ್ವಾಮಿ ವಿವೇಕಾನಂದರ ಸಂದೇಶ. ನಮ್ಮ ಸರ್ಕಾರವೂ ಇದೇ ಚಿಂತನೆಯೊಂದಿಗೆ ಕೆಲಸ ಮಾಡುತ್ತಿದೆ. 'ಯುವ ಯುಗ ನವ ಯುಗ' ನಮ್ಮ ಸರ್ಕಾರದ ಘೋಷಣೆಯಾಗಿದೆ ಎಂದರು. ಕಾರ್ಯಕ್ರಮದ ಬಳಿಕ ನಿರ್ಗಮಿಸುವಾಗ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭುಜ ತಟ್ಟಿ, ಕೈಹಿಡಿದು ಕೆಲ ಹೊತ್ತು ಮಾತನಾಡಿ ಜೊತೆಯಾಗಿ ಕರೆದೊಯ್ದರು.











**ಜಲಾಶಯಗಳ ನೀರಿನ ಮಟ್ಟ**

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 95.57 ಅಡಿ |
| ಒಳಹರಿವು | 20435 ಕ್ಯುಸೆಕ್ |
| ಹೊರ ಹರಿವು | 1768 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2281.43 ಅಡಿ |
| ಒಳಹರಿವು | 19037 ಕ್ಯುಸೆಕ್ |
| ಹೊರ ಹರಿವು | 12000 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2857.30 ಅಡಿ |
| ಒಳಹರಿವು | 10000 ಕ್ಯುಸೆಕ್ |
| ಹೊರ ಹರಿವು | 12500 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2909.50 ಅಡಿ |
| ಒಳಹರಿವು | 11686 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

# ಕಬಿನಿ ನೀರು ಹಿಡಿದಿಡಲು ಅಸಾಧ್ಯ

## ಕರ್ನಾಟಕ ಬಂದ್ ವಾಪಸ್‌ಗೆ ಸಿಎಂ ಡಿ.ಕೆ.ಶಿವಕುಮಾರ್ ಮನವಿ

**ಮೈಸೂರು:** ಕಬಿನಿ ಜಲಾಶಯ ಭರ್ತಿ ಹಂತ ತಲುಪಿದೆ. ಕಬಿನಿ ತುಂಬಿದರೆ ನೀರು ಹಿಡಿದಿಡಲು ಸಾಧ್ಯವಿಲ್ಲ. ನದಿಗೆ ನೀರು ಹರಿಸಬೇಕಾಗುತ್ತದೆ. ಹೀಗಾಗಿ ಹೋರಾಟಗಾರರು ರಾಜ್ಯದ ಗೌರವ ಕಾಪಾಡಲು ಬಂದ್ ಕರೆ ಹಿಂಪಡೆಯಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಾವೇರಿ ಕೊಳ್ಳದಲ್ಲಿ ಒಳಹರಿವು 40 ಸಾವಿರ ಕ್ಯುಸೆಕ್‌ನಷ್ಟಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ತಮಿಳುನಾಡಿಗೆ ನೀರು ಹರಿಸುವ ಸಂಬಂಧ ಭಾನುವಾರ ಸರ್ವಪಕ್ಷ ಸಭೆಯಲ್ಲಿ ಒಮ್ಮತದ ತೀರ್ಮಾನಕ್ಕೆ ಬರುತ್ತೇವೆ. ಅಲ್ಲಿವರೆಗೆ ಶಾಂತಿ ಕಾಪಾಡಬೇಕು ಎಂದು ತಿಳಿಸಿದರು.

ಕಳೆದ ವರ್ಷ ಇದೇ ಅವಧಿಯಲ್ಲಿ ತಮಿಳಿನಾಡಿಗೆ 16 ಟಿಎಂಸಿ ಅಡಿ ನೀರು ಹರಿಸಲಾಗಿತ್ತು. ಈ ವರ್ಷ ಸಂಕಷ್ಟದ ಪರಿಸ್ಥಿತಿ ಹಿನ್ನೆಲೆಯಲ್ಲಿ ತಮಿಳುನಾಡು ನಿತ್ಯ 9 ಸಾವಿರ ಕ್ಯುಸೆಕ್‌ಗೆ ಬೇಡಿಕೆ ಇಟ್ಟಿತ್ತು. ಪ್ರಾಧಿಕಾರ 3500





ಕ್ಯುಸೆಕ್ ಹರಿಸಲು ಆದೇಶಿಸಿದೆ. ಹೀಗಾಗಿ ನಾವು ಹೆಚ್ಚು ಆತಂಕ ಪಡುವ ಅಗತ್ಯವಿಲ್ಲ ಎಂದು ಸಿಎಂ ತಿಳಿಸಿದರು.

ಕನ್ನಡ ಪರ ಹೋರಾಟಗಾರರು ಬಂದ್‌ಗೆ ಕರೆ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ಎಲ್ಲರ ಹಕ್ಕು. ಆದರೆ ಅದು ಕೇವಲ ಮಾಧ್ಯಮಗಳ ಮುಂದೆ ಸೀಮಿತ ಆಗಬಾರದು. ಆಸ್ತಿಪಾಸ್ತಿಗೆ ತೊಂದರೆ ಆಗುವುದಾದರೆ ಸರ್ಕಾರ ಅದನ್ನು ಒಪ್ಪುವುದಿಲ್ಲ. ನಾವೆಲ್ಲ ಒಂದೇ ದೇಶದವರು. ತಮಿಳುನಾಡಿಗೂ ಪುಟ 2ಕ್ಕೆ

### ಬಿಜೆಪಿಯವರು ಪ್ಯಾಂಟು, ಶರ್ಟು ಹರಿಯುತ್ತಿದ್ದಾರೆ!

ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕುರಿತು ಪ್ರತಿಕ್ರಿಯಿಸಿದ ಅವರು, ಬೇಡ ತಡೆಯಿರಿ. ಈಗಲೇ ಏನೂ ಇಲ್ಲದೆಯೇ ಬಿಜೆಪಿಯವರು ಪುಟ 2ಕ್ಕೆ

### ವಿಜಯ್‌ಗೆ ಮತ್ತೆ ಆಹ್ವಾನ

ಕಾವೇರಿ ನೀರು ಹಂಚಿಕೆ ಸಂಬಂಧ ಪರಸ್ಪರ ಮಾತುಕತೆಗೆ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಆ.3ರಂದು ಬೆಂಗಳೂರಿಗೆ ಬರಬೇಕಿತ್ತು. ಆದರೆ ರಾಜ್ಯದಲ್ಲಿ ಪರಿಸ್ಥಿತಿ ತಿಳಿಯಾದ ನಂತರ ಮತ್ತೊಮ್ಮೆ ಬರುವಂತೆ ಪುಟ 2ಕ್ಕೆ

# ನಾಳೆ ಸಂಪುಟ ವಿಸ್ತರಣೆ ಫಿಕ್ಸ್

**ಬೆಂಗಳೂರು:** ರಾಜ್ಯ ಸಚಿವ ಸಂಪುಟ ವಿಸ್ತರಣೆಗೆ ಕೊನೆಗೂ ಮುಹೂರ್ತ ನಿಗದಿಯಾಗಿದೆ. ಆ.3ರಂದು ಸೋಮವಾರ ಸಂಜೆ 4 ಗಂಟೆಗೆ ನೂತನ ಸಚಿವರ ಪ್ರಮಾಣವಚನ ಕಾರ್ಯಕ್ರಮ ಫಿಕ್ಸ್ ಆಗಿದೆ.

**▶▶ ಬೆಂಗಳೂರಿಗೆ ಇಂದು ರಾತ್ರಿ ನೂತನ ಸಚಿವರ ಪಟ್ಟಿ ರವಾನೆ**

ಕಾಂಗ್ರೆಸ್ ಹೈಕಮಾಂಡ್ ಅಂತಿಮ ಹಂತದ ಒಪ್ಪಿಗೆ ನೀಡಿರುವ ಹಿನ್ನೆಲೆಯಲ್ಲಿ ಸೋಮವಾರ ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ. ಪ್ರಮಾಣವಚನಕ್ಕೆ ಪುಟ 2ಕ್ಕೆ

# ವಾಣಿಜ್ಯ ಸಿಲಿಂಡರ್ ಬೆಲೆ ಇಳಿಕೆ





**ನವದೆಹಲಿ:** ವಾಣಿಜ್ಯ ಸಿಲಿಂಡರ್ ಬಳಕೆದಾರರಿಗೆ ಗುಡ್‌ನ್ಯೂಸ್ ಸಿಕ್ಕಿದೆ. ಬೆಂಗಳೂರು ಸೇರಿದಂತೆ ದೇಶದಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ ಮತ್ತೊಮ್ಮೆ ಇಳಿಕೆಯಾಗಿದೆ.

ತೈಲ ಮಾರುಕಟ್ಟೆ ಕಂಪನಿಗಳು (ಒಎಂಸಿಗಳು) ಕಳೆದ ತಿಂಗಳು 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು 183.50 ರೂ. ನಷ್ಟು ಕಡಿಮೆ ಮಾಡಿದ್ದವು. ಈಗ ಒಂದು ತಿಂಗಳಲ್ಲಿ 2ನೇ ಬಾರಿಗೆ ಬೆಲೆ 200 ರೂ.ನಷ್ಟು ಇಳಿಕೆಯಾಗಿದೆ. ಬೆಲೆ ಇಳಿಕೆಯಿಂದ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಫಾಸ್ಟ್‌ಫುಡ್ ಹಾಗೂ ಕ್ಯಾಟರಿಂಗ್ ಮಾಲೀಕರಿಗೆ ಗುಡ್‌ನ್ಯೂಸ್ ಪುಟ 2ಕ್ಕೆ



# ಮತ್ತೊಮ್ಮೆ ಬಲಿಷ್ಠ ಸರ್ಕಾರಕ್ಕೆ ಆದ್ಯತೆ

## ಮೈಸೂರಿನಲ್ಲಿ ಮುಖ್ಯಮಂತ್ರಿ ಡಿಕೆಶಿಗೆ ಅದ್ದೂರಿ ಸ್ವಾಗತ, ಮೆರವಣಿಗೆ

**ಮೈಸೂರು:** ರಾಜ್ಯದಲ್ಲಿ ಮತ್ತೊಮ್ಮೆ ಬಲಿಷ್ಠ ಸರ್ಕಾರ ರಚಿಸಲು ಜನರು ಅವಕಾಶ ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮನವಿ ಮಾಡಿದರು.

ಮುಖ್ಯಮಂತ್ರಿ ಆದ ನಂತರ ನಗರಕ್ಕೆ ಮೊದಲ ಬಾರಿಗೆ ಆಗಮಿಸಿದ ಅವರಿಗೆ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿ ರೋಡ್ ಶೋ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿ, ರಾಜ್ಯಕ್ಕೆ ಮತ್ತೊಮ್ಮೆ ಬಲಿಷ್ಠ ಸರ್ಕಾರಕ್ಕೆ ನೀವು ಅವಕಾಶ ಮಾಡಿಕೊಡಿ. ನಾನು ನಿಮ್ಮೂರಿನ ಅಳಿಯ. ನನಗೆ ಕನಕಪುರ ಬೇರೆ ಅಲ್ಲ. ಮೈಸೂರು ಬೇರೆ ಅಲ್ಲ. ನಾನು ಮುಖ್ಯಮಂತ್ರಿ ಆದರೂ ಮೈಸೂರು ಅಳಿಯನೇ ಎಂದು ಹೇಳಿದರು.

ನಾನು ಮತ್ತು ಸಿದ್ದರಾಮಯ್ಯ ಇಡೀ ರಾಜ್ಯ ಪ್ರವಾಸ ಮಾಡಿ 136 ಸ್ಥಾನಗಳನ್ನು ಗೆದ್ದಿದ್ದೇವೆ. ಚುನಾವಣೆಗೂ ಮುನ್ನ ಚಾಮುಂಡೇಶ್ವರಿ ತಾಯಿಯ ಪುಟ 2ಕ್ಕೆ

# ಚಾಮುಂಡೇಶ್ವರಿಗೆ ಸಿಎಂ ಡಿಕೆಶಿ ವಿಶೇಷ ಪೂಜೆ

**ಮೈಸೂರು:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ಶನಿವಾರ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.



ಪವಿತ್ರ ಆಷಾಢ ಮಾಸದ ಶುಭ ಸಂದರ್ಭದಲ್ಲಿ ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ತಾಯಿ ದಿವ್ಯ ದರ್ಶನ ಪಡೆಯುವ ಸೌಭಾಗ್ಯ ದೊರೆಯಿತು ಎಂದು ಅವರು ತಿಳಿಸಿದರು. ತಾಯಿಯ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ, ರಾಜ್ಯದಲ್ಲಿ ಉತ್ತಮ ಮಳೆಯಾಗಿ ರೈತರ ಬದುಕು ಹಸನಾಗಲಿ, ಎಲ್ಲರ ಮನೆಗಳಲ್ಲಿ ಸುಖ, ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಿದೆ ಎಂದು ಹೇಳಿದರು.

# ಕಬಿನಿ ಭರ್ತಿಗೆ ಸಮೀಪ: ನದಿಗೆ ನೀರು ಬಿಡುಗಡೆ

**ಮೈಸೂರು:** ಕೇರಳದ ವಯನಾಡು ಭಾಗದಲ್ಲಿ ಭಾರೀ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಬಳಿ ಇರುವ ಕಬಿನಿ ಜಲಾಶಯ ಭರ್ತಿಯಾಗುವ ಹಂತ ತಲುಪಿದೆ. ಕಬಿನಿ ಜಲಾಶಯಕ್ಕೆ 16 ಸಾವಿರ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಹೀಗಾಗಿ ತಮಿಳುನಾಡಿಗೆ ನೀರು ಬಿಡುವ ಸಮಸ್ಯೆ ಬಗೆಹರಿಯುವ ನಿರೀಕ್ಷೆ ಇದೆ.

ಜಲಾಶಯದ ಭದ್ರತೆ ಹಾಗೂ ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಕಬಿನಿ ಡ್ಯಾಂನಿಂದ ನದಿಗೆ 10,000 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ. ನದಿಗೆ ಹರಿಸಲಾದ ಈ ನೀರು ಕಪಿಲಾ ನದಿಯ ಮೂಲಕ ತಮಿಳುನಾಡಿಗೆ ಹರಿದು ಹೋಗಲಿದೆ. ವಯನಾಡು ಜಲಾನಯನ ಪ್ರದೇಶದಲ್ಲಿ ಮಳೆ ಮುಂದುವರಿದಿರುವುದರಿಂದ ಕಬಿನಿ ಜಲಾಶಯಕ್ಕೆ ಒಳಹರಿವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಪರಿಣಾಮವಾಗಿ ಹಂತ ಹಂತವಾಗಿ ಕಬಿನಿ ಡ್ಯಾಂನಿಂದ ನೀರು ಬಿಡುಗಡೆಯ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಕಪಿಲಾ ನದಿಯ ಎರಡೂ ದಂಡೆಗಳ ಹಾಗೂ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರು ತಕ್ಷಣವೇ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ತಾಲೂಕು ಆಡಳಿತ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಪುಟ 2ಕ್ಕೆ



### ಕೇರಳದಲ್ಲಿ ಭೂಕುಸಿತ: ಮೂವರು ಸಾವು

**ತಿರುವನಂತಪುರಂ:** ಕೇರಳದಲ್ಲಿ ಸುರಿಯುತ್ತಿರುವ ಭಾರೀ ಮಳೆ ಪರಿಣಾಮ ಇಡುಕ್ಕಿ ಜಿಲ್ಲೆಯಲ್ಲಿ ವ್ಯಾಪಕ ಭೂಕುಸಿತ ಸಂಭವಿಸಿದೆ. ಇಡುಕ್ಕಿ ಹಾಗೂ ಕೊಟ್ಟಾಯಂ ಜಿಲ್ಲೆಗಳಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ ಕನಿಷ್ಠ ಮೂವರು ಮೃತಪಟ್ಟಿದ್ದಾರೆ. ಹಲವರು ಮಣ್ಣಿನಡಿಯೇ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಪುಟ 2ಕ್ಕೆ



### ಪತ್ನಿ ಕೊಲೆ ಮಾಡಿ ಪತಿ ನೇಣಿಗೆ ಶರಣು



**ಹಾಸನ:** ಪತ್ನಿಗೆ ಅನೈತಿಕ ಸಂಬಂಧವಿದೆ ಎಂದು ಕೊಲೆ ಮಾಡಿ ವಿಡಿಯೋ ಮಾಡಿಟ್ಟು ಬಳಿಕ ಪತಿ ಸಹ ನೇಣಿಗೆ ಶರಣಾದ ಘಟನೆ ಬೇಲೂರು ಸಮೀಪದ ಕೆಸಗೋಡು ಗ್ರಾಮದಲ್ಲಿ ನಡೆದಿದೆ.

ಗಗನ (38) ಕೊಲೆಯಾದ ಮಹಿಳೆ. ಪುಟ 2ಕ್ಕೆ

### ಉಪಸಭಾಪತಿ ಸ್ಥಾನಕ್ಕೆ ಪ್ರಾಣೇಶ್ ರಾಜೀನಾಮೆ

**ಬೆಂಗಳೂರು:** ವಿಧಾನ ಪರಿಷತ್ ಉಪಸಭಾಪತಿ ಸ್ಥಾನಕ್ಕೆ ಎಂ.ಕೆ.ಪ್ರಾಣೇಶ್ ಅವರು ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ಪತ್ರವನ್ನು ಸಭಾಪತಿ ಸವರಾಜ ಹೊರಟ್ಟಿ ಅವರಿಗೆ ಸಲ್ಲಿಸಿದ್ದಾರೆ. ಪುಟ 2ಕ್ಕೆ




### ಮನೆ ಕಟ್ಟದಿದ್ದರೆ ಸೈಟ್ ವಾಪಸ್: ಸಿಎಂ ಎಚ್ಚರಿಕೆ

**ಬೆಂಗಳೂರು:** ಸರ್ಕಾರದಿಂದ ಹಂಚಿಕೆಯಾಗಿರುವ ಸೈಟ್‌ಗಳಲ್ಲಿ 5 ವರ್ಷ ಕಳೆದರೂ ಮನೆ ಕಟ್ಟದೇ ಖಾಲಿ ಬಿಟ್ಟಿರುವ ನಿವೇಶನಗಳನ್ನ ವಾಪಸ್ ಪಡೆಯಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದರು.

ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರೊದಿಗೆ 'ತ್ಯಾಜ್ಯದಿಂದ ಸ್ವಾತಂತ್ರ್ಯ' ಅಭಿಯಾನಕ್ಕೆ ಚಾಲನೆ ನೀಡಿ ಸಿಎಂ ಡಿಕೆ ಶಿವಕುಮಾರ್ ಮಾತನಾಡಿದರು.

ಬಿಡಿಎ, ಬಿಬಿಎಂಪಿ ಸೇರಿದಂತೆ ಪುಟ 2ಕ್ಕೆ



### ಬಿಡದಿ ಟೌನ್‌ಶಿಪ್ ವಿರೋಧಿಸಿ ಆ.9ರಿಂದ ಜೆಡಿಎಸ್ ಪಾದಯಾತ್ರೆ

**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ ಆಗಸ್ಟ್ 9ರಿಂದ 11ರವರೆಗೆ ನಡೆಯಲಿದೆ. ಚೆನ್ನಮ್ಮ ನಿಧನದಿಂದ ಮುಂದೂಡಿಕೆ ಆಗಿದ್ದ ಪಾದಯಾತ್ರೆಗೆ ಹೊಸ ದಿನಾಂಕ ನಿಗದಿ ಮಾಡಲಾಗಿದೆ.

ದೋಸ್ತಿ ಪಕ್ಷ ಬಿಜೆಪಿಯನ್ನ ದೂರವಿಟ್ಟು ಪಾದಯಾತ್ರೆ ಮಾಡಲು ಜೆಡಿಎಸ್ ತೀರ್ಮಾನ ಮಾಡಿದೆ. ಭೈರಮಂಗಲದಲ್ಲಿ ಆಗಸ್ಟ್ 9ರಂದು ಪಾದಯಾತ್ರೆ ಶುರುವಾಗಲಿದೆ. ಆ.11ರಂದು ಫ್ರೀಡಂ ಪಾರ್ಕ್‌ಗೆ ಪುಟ 2ಕ್ಕೆ

## ಮೊದಲ ಪುಟದಿಂದ

### ನಾಳೆ ಸಂಪುಟ ವಿಸ್ತರಣೆ ಫಿಕ್ಸ್

ಲೋಕಭವನದಲ್ಲಿ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸೂಚಿಸಿದ್ದಾರೆ. ನೂತನ ಸಚಿವರ ಪಟ್ಟಿ ಭಾನುವಾರ ರಾತ್ರಿ ಸಿಎಂ ಡಿಕೆಶಿ ಕೈಸೇರಲಿದೆ. ಸೋಮವಾರ ಸಂಜೆ 4 ಗಂಟೆಗೆ ನೂತನ ಸಚಿವರ ಪ್ರಮಾಣವಚನ ಫಿಕ್ಸ್ ಎನ್ನಲಾಗಿದೆ. 18 ಸಚಿವರು ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ. ಈಗಾಗಲೇ ಹೈಕಮಾಂಡ್‌ಗೆ ಸಿದ್ದರಾಮಯ್ಯ, ಡಿಕೆಶಿ ಅವರು ಪ್ರತ್ಯೇಕ ಪಟ್ಟಿ ನೀಡಿದ್ದಾರೆ. ಮೂಲಗಳ ಪ್ರಕಾರ, ಖಾಲಿ ಇರುವ 20 ಸ್ಥಾನಗಳ ಪೈಕಿ, 18 ಸ್ಥಾನಗಳು ಭರ್ತಿಯಾಗೋ ಸಾಧ್ಯತೆಗಳಿವೆ. ದಾವಣಗೆರೆ ಬೈ ಎಲೆಕ್ಷನ್‌ನಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆಂದು ಜಮೀರ್ ಅಹ್ಮದ್ ವಿರುದ್ಧ ಗಂಭೀರ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಅವರಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇಲ್ಲ ಎನ್ನಲಾಗಿದೆ.

### ವಿವೇಕ ಸ್ಮಾರಕ ಉದ್ಘಾಟನೆ

ಮೂಲಕ ಓವಲ್ ಮೈದಾನಕ್ಕೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಯತೀಂದ್ರ ಸಿದ್ದರಾಮಯ್ಯ ಸ್ವಾಗತಿಸಿದರು.

### ಪ್ಯಾಂಟು, ಶರ್ಟು ಹರಿಯುತ್ತಿದ್ದಾರೆ!

ನನ್ನ ಪ್ಯಾಂಟು-ಶರ್ಟು ಹರಿದು ಹಾಕುತ್ತಿದ್ದಾರೆ. ಒಂದು ಕಡೆ ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಅಶೋಕ್ ಬಂದು ನುಗ್ಗುತ್ತಿದ್ದಾರೆ. ಇನ್ನೊಂದೆಡೆ, ಕರ್ನಾಟಕದ ಹಿತಾಸಕ್ತಿ ರಕ್ಷಣೆಗಾಗಿ ಬಿಜೆಪಿ ಸಚಿವರು, ಸಂಸದರು ದೆಹಲಿಯಲ್ಲಿ ನಮ್ಮೊಂದಿಗೆ ಕೇಂದ್ರ ಸಚಿವರನ್ನು ಭೇಟಿ ಮಾಡಿ, ಅವರ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ನಾನು ಏನು ಹೇಳಲಿ ಎಂದು ಬಿಜೆಪಿಗೆ ತಿರುಗೇಟು ನೀಡಿದರು.

### ವಿಜಯ್‌ಗೆ ಮತ್ತೆ ಆಹ್ವಾನ

ಕೋರಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. ಕಾವೇರಿ ವಿವಾದ ಮಾತುಕತೆಯಲ್ಲಿ ಬಗೆಹರಿಸಲು ನಮ್ಮ ಸ್ವಾಗತವಿದೆ. ತಮಿಳುನಾಡು ಹಕ್ಕಿಗೆ ನಾವು ಅಡ್ಡಬರುವುದಿಲ್ಲ. ನ್ಯಾಯಾಲಯ ನಮಗೆ ಯಾವ ತೀರ್ಪು ನೀಡಿದೆಯೋ ಅದನ್ನು ಕಾಪಾಡಿಕೊಳ್ಳಲು ಬದ್ಧರಿದ್ದೇವೆ ಎಂದರು.

### ಭೂಕುಸಿತ: ಮೂವರು ಸಾವು

ರಕ್ಷಣಾ ತಂಡಗಳಿಂದ ಕಾರ್ಯಾಚರಣೆ ಮುಂದುವರಿದಿದೆ. ಇಡುಕ್ಕಿಯ ವಾಗಮನ್ ಪ್ರದೇಶದಲ್ಲಿ ಭೂಕುಸಿತ ಮನೆ ಮೇಲೆ ಬಿದ್ದ ಪರಿಣಾಮ ವೈಕಂ ಮೂಲದ ಪ್ರಭಾಕರನ್ ನಾಯರ್ ಮೃತಪಟ್ಟಿದ್ದಾರೆ. ಅವರ ಮೃತದೇಹ ಇನ್ನೂ ಪತ್ತೆಯಾಗಿಲ್ಲ. ಇಡುಕ್ಕಿಯ ಅಡೂರ್ಮಲಾ ಪ್ರದೇಶದಲ್ಲೂ ಭೂಕುಸಿತ ಸಂಭವಿಸಿದೆ. ಒಬ್ಬರು ಮಣ್ಣಿನಡಿ ಸಿಲುಕಿರುವ ಶಂಕೆ ಇದೆ. ಇಡುಕ್ಕಿಯ ಮತ್ತೊಂದು ಭಾಗದಲ್ಲಿ ಭೂಕುಸಿತ ಮನೆ ಮೇಲೆ ಬಿದ್ದ ಪರಿಣಾಮ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

### ಮನೆ ಕಟ್ಟದಿದ್ದರೆ ಸೈಟ್ ವಾಪಸ್

ಸರ್ಕಾರಿ ಸಂಸ್ಥೆಗಳಿಂದ ನಿವೇಶನ ಪಡೆದು ಮನೆ ಕಟ್ಟದೇ ಖಾಲಿ ಬಿಟ್ಟರೆ ಡಬಲ್ ಟ್ಯಾಕ್ಸ್ ಕಟ್ಟಬೇಕಾಗುತ್ತದೆ. ಮನೆ ಕಟ್ಟದೇ ಇದ್ದರೆ ಖಾಲಿ ಸೈಟನ್ನ ವಾಪಸ್ ಕೊಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಖಾಲಿ ಸೈಟನ್ನು ವಾಪಸ್ ಪಡೆಯುವಂತಹ ಕೆಲಸ ಆಗುತ್ತದೆ. ಸರ್ಕಾರ ಮನೆ ಕಟ್ಟಲಿ ಅಂತ ಸೈಟ್ ಕೊಟ್ಟಿರೋದು. ಕಸ ಹಾಕಲಿ ಅಂತ ಅಲ್ಲ. ಖಾಲಿ ಸೈಟ್ ಮಾಡಿಕೊಂಡು ಕಸ ಹಾಕಿದರೆ ಸಹಿಸಲ್ಲ. ಸರ್ಕಾರದಿಂದ ಹಂಚಿಕೆ ಆಗಿರುವ ಸೈಟ್‌ಗೆ ಈಗಿನ ಬೆಲೆ ಏನಿದೆ ಆ ಹಣವನ್ನ ವಾಪಸ್ ಕೊಡ್ತೇವೆ. ಹಣ ಕೊಟ್ಟು ಸೈಟ್ ವಾಪಸ್ ಪಡೆಯುತ್ತೇವೆ. ಏಕೆಂದರೆ ಕೆಲವರು ಸೈಟ್ ತೆಗೆದುಕೊಂಡು 20-30 ವರ್ಷಗಳಾದರೂ ಮನೆ ಕಟ್ಟಿಲ್ಲ ಎಂದು ಹೇಳಿದರು.

### ಆ.9ರಿಂದ ಜೆಡಿಎಸ್ ಪಾದಯಾತ್ರೆ

ಪಾದಯಾತ್ರೆ ತಲುಪಲಿದೆ. ಅಂದು ಬೃಹತ್ ಸಮಾವೇಶವನ್ನ ಹಮ್ಮಿಕೊಂಡಿದೆ. ಪಾದಯಾತ್ರೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಚಾಲನೆ ನೀಡಲಿದ್ದಾರೆ. ಒಂದು ದಿನ ಮಾಜಿ ಪ್ರಧಾನಿ ದೇವೇಗೌಡರು ಭಾಗಿಯಾಗಲಿದ್ದಾರೆ. ಆಗಸ್ಟ್ 14ರಂದು ವಿಧಾನಸೌಧ ಚಲೋ ನಡೆಯಲಿದೆ.

### ಕಬಿನಿ ನೀರು ಹಿಡಿದಿಡಲು ಅಸಾಧ್ಯ

ತೊಂದರೆ ಆಗಬಾರದು. ನಮ್ಮೆಲ್ಲ ಹೋರಾಟಗಳು ಸೌಹಾರ್ದಯುತವಾಗಿ ನಡೆಯಬೇಕು ಎಂದರು. ತಮಿಳುನಾಡಿಗೆ 177 ಟಿಎಂಸಿ ನೀಡಬೇಕೆಂಬ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್ ತೀರ್ಪು ಎರಡೂ ರಾಜ್ಯಕ್ಕೂ ವರ. ಸಮನಾಂತರ ಜಲಾಶಯ ನಿರ್ಮಾಣದ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ನಮಗೆ ದೊಡ್ಡ ಜಯವಾಗಿದೆ. ಕೇಂದ್ರ ಸರ್ಕಾರ ಸಹ ಮೇಕೆದಾಟು ಪರವಾಗಿ ನಿಂತಿದೆ. ಅಣೆಕಟ್ಟೆ ನಿರ್ಮಾಣಕ್ಕೆ ಹಸಿರು ನಿಶಾನೆ ತೋರಿದೆ. ತಮಿಳುನಾಡಿನ ಸಂಸತ್ ಸದಸ್ಯರು, ಶಾಸಕರು ಅವರ ರಾಜಕೀಯ ಅಸ್ತಿತ್ವಕ್ಕೆ ಹೋರಾಟ ಮಾಡುತ್ತಿದ್ದಾರೆ. ಅವರಿಗೂ ಎಲ್ಲದರ ಅರಿವಿದೆ. ಒಂದು ಕಾಲದಲ್ಲಿ ತಮಿಳುನಾಡು ಸರ್ಕಾರ ಸಮನಾಂತರ ಜಲಾಶಯಕ್ಕೆ ಒಪ್ಪಿಗೆ ಸೂಚಿಸಿ ಅಫಿಡವಿಟ್ ಸಹ ನೀಡಿತ್ತು ಎಂದು ಸ್ಮರಿಸಿದರು.

### ಪತ್ನಿ ಕೊಲೆ ಮಾಡಿ ಪತಿ ನೇಣಿಗೆ

ರಘು (41) ಪತ್ನಿಯನ್ನು ಕೊಂದು ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಕಳೆದ 13 ವರ್ಷಗಳ ಹಿಂದೆ ಗಗನ-ರಘು ವಿವಾಹವಾಗಿತ್ತು. ದಂಪತಿಗೆ 12 ವರ್ಷದ ಹಾಗೂ 6 ವರ್ಷದ ಇಬ್ಬರು ಗಂಡು ಮಕ್ಕಳಿದ್ದಾರೆ. ಕಾರಿನಲ್ಲಿ ಪತ್ನಿ ಕೊಲೆ ಮಾಡಿ ಶವ ಬಿಸಾಡಿರುವ ಶಂಕೆ ವ್ಯಕ್ತಪಡಿಸಲಾಗಿದೆ. ಬಳಿಕ ಕಸೆಗೋಡು ಗ್ರಾಮದಲ್ಲಿ ರಘು ಕಾರು ನಿಲ್ಲಿಸಿ ರಸ್ತೆ ಬದಿ ಮರಕ್ಕೆ ನೇಣುಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

### ಉಪಸಭಾಪತಿ ಪ್ರಾಣೇಶ್ ರಾಜೀನಾಮೆ

ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ 2021ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಎಂ.ಕೆ.ಪ್ರಾಣೇಶ್ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಪ್ರಾಣೇಶ್ ರಾಜೀನಾಮೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಗಾಯತ್ರಿ ಶಾಂತೇಗೌಡ ವಿಜೇತ ಅಭ್ಯರ್ಥಿ ಎಂದು ಘೋಷಿಸಲಾಗಿದೆ.

ಎನ್.ಆರ್.ಪುರ. ಶೃಂಗೇರಿ ಮತ್ತು ಕೊಪ್ಪ ಟೌನ್ ಪಂಚಾಯ್ತಿಗಳ 12 ನಾಮನಿರ್ದೇಶಿತ ಸದಸ್ಯರು ಚಲಾಯಿಸಿದ್ದ ಮತಗಳನ್ನು ಪರಿಗಣಿಸಿ ಎಂ.ಕೆ.ಪ್ರಾಣೇಶ್ ಅವರನ್ನು ವಿಜೇತ ಅಭ್ಯರ್ಥಿ ಎಂದು ಘೋಷಿಸಿದ್ದ ಕೇಂದ್ರ ಚುನಾವಣಾ ಆಯೋಗದ ಕ್ರಮವನ್ನು ಅಮಾನ್ಯಗೊಳಿಸಬೇಕು ಹಾಗೂ ನನ್ನನ್ನೇ ವಿಜೇತ ಅಭ್ಯರ್ಥಿಯಾಗಿ ಘೋಷಿಸಬೇಕು ಎಂದು ಗಾಯತ್ರಿ ಅರ್ಜಿ ಸಲ್ಲಿಸಿದ್ದರು.

### ಬಲಿಷ್ಠ ಸರ್ಕಾರಕ್ಕೆ ಆದ್ಯತೆ

ಬಳಿ ದೊಡ್ಡ ಜವಾಬ್ದಾರಿ ನೀಡುವಂತೆ ಪ್ರಾರ್ಥನೆ ಮಾಡಿದ್ದೆವು. ಚಾಮುಂಡೇಶ್ವರಿ ಆಶೀರ್ವಾದದಿಂದಲೇ ಜನರು ಅವಕಾಶ ನೀಡಿದ್ದಾರೆ ಎಂದರು. ಪ್ರಧಾನಿ ಭೇಟಿ ಹಿನ್ನೆಲೆ ಪಕ್ಷದ ಕಾರ್ಯಕರ್ತರ ಸಭೆ ನಡೆಸಲು ಸಾಧ್ಯವಾಗಲಿಲ್ಲ. ಭದ್ರತಾ ಕಾರಣಗಳಿಂದ ಸಭೆ ರದ್ದಾಗಿದೆ. ಮುಂದಿನ ದಿನಗಳಲ್ಲಿ ಕಾರ್ಯಕರ್ತರ ಸಮಾವೇಶ ನಡೆಸುತ್ತೇವೆ ಎಂದು ತಿಳಿಸಿದರು. ಕಾರಂಜಿ ಕೆರೆ ವೃತ್ತದಿಂದ ಕುರುಬಾರಹಳ್ಳಿ ವೃತ್ತದವರೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೆರವಣಿಗೆಯಲ್ಲಿ ಭಾಗಿಯಾದರು.

### ನದಿಗೆ ನೀರು ಬಿಡುಗಡೆ

ಜಾಗೃತಿ ಮೂಡಿಸಿ ಮುನ್ನೆಚ್ಚರಿಕೆ ನೀಡಿದ್ದಾರೆ.

ಕೊಡಗಿನಲ್ಲೂ ಭಾರೀ ಮಳೆ: ಕೊಡಗು ಜಿಲ್ಲೆಯಾದ್ಯಂತ ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಹಲವು ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿವೆ. ಕಾವೇರಿ ಹಾಗೂ ಹಟ್ಟಿಹೊಳೆ ನದಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಭಾಗಮಂಡಲದ ತ್ರಿವೇಣಿ ಸಂಗಮ ಹಾಗೂ ಸ್ನಾನಘಟ್ಟ ಜಲಾವೃತಗೊಂಡಿವೆ. ಇದೇ ವೇಳೆ ಹಾರಂಗಿ ಜಲಾಶಯಕ್ಕೂ ಒಳಹರಿವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಮಳೆ ಮುಂದುವರಿದಿರುವ ಹಿನ್ನೆಲೆಯಲ್ಲಿ ನದಿ ಪಾತ್ರದ ಜನರು ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

### ವಾಣಿಜ್ಯ ಸಿಲಿಂಡರ್ ಬೆಲೆ ಇಳಿಕೆ

ಕೊಟ್ಟಂತಾಗಿದೆ. ಆದರೆ ಗೃಹಬಳಕೆ ಸಿಲಿಂಡರ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

# ರಾಮನಗರದ ಪ್ರಮುಖ ವೃತ್ತಗಳಿಗೆ ನಾಮಕರಣ

## ರೈಲು ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್, ಎಪಿಎಂಸಿ ವೃತ್ತಕ್ಕೆ ಎಚ್.ಡಿ.ದೇವೇಗೌಡ, ಐಜೂರು ವೃತ್ತಕ್ಕೆ ಜಗಜ್ಯೋತಿ ಬಸವೇಶ್ವರ ವೃತ್ತ ಹೆಸರು ನಾಮಕರಣಕ್ಕೆ ನಿರ್ಣಯ

ರಾಮನಗರ: ನಗರದ ಪ್ರಮುಖ ವೃತ್ತ ಮತ್ತು ರಸ್ತೆಗಳಿಗೆ ಮಹನೀಯರ ಹೆಸರುಗಳನ್ನು ನಾಮಕರಣ ಮಾಡುವ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ.

ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರ ಅಧ್ಯಕ್ಷತೆಯಲ್ಲಿ ನಗರಸಭೆಯ ಪ್ರಶಸ್ತಿ ಭವನದಲ್ಲಿ ನಡೆದ ಸಾಮಾನ್ಯಸಭೆಯಲ್ಲಿ ನಗರದ ಕೆಲ ರಸ್ತೆ ಹಾಗೂ ವಿವಿಧ ಬಡಾವಣೆಗಳ ರಸ್ತೆಗಳಲ್ಲಿರುವ ವೃತ್ತಗಳಿಗೆ ಮಹಾನೀಯರ ಹೆಸರುಗಳನ್ನು ನಾಮಕರಣ ಮಾಡಲು ಪ್ರಸ್ತಾಪಿಸಿದಾಗ ಸದಸ್ಯರು ಒಪ್ಪಿಗೆ ಸೂಚಿಸಿದರು.

ರೈಲು ನಿಲ್ದಾಣ ವೃತ್ತಕ್ಕೆ ಹಜರತ್ ಟಿಪ್ಪು ಸುಲ್ತಾನ್ ಸರ್ಕಲ್, ಚರ್ಚ್ ವೃತ್ತಕ್ಕೆ ಲೂರ್ದು ಮಾತಾ ಸರ್ಕಲ್, ವಾಟರ್ ಟ್ಯಾಂಕ್ ಸರ್ಕಲ್‌ಗೆ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಲ್, ಶಾಂತಿಲಾಲ್ ಲೇ ಔಟ್ ವೃತ್ತಕ್ಕೆ ಶ್ರೀ ಬಿಜಿಎಸ್ ಸರ್ಕಲ್ , ರಾಯರದೊಡ್ಡಿ ವೃತ್ತಕ್ಕೆ ಛತ್ರಪತಿ ಶಿವಾಜಿ ಸರ್ಕಲ್, ಎಪಿಎಂಸಿ ಬಳಿಯ ವೃತ್ತಕ್ಕೆ ಎಚ್.ಡಿ.ದೇವೇಗೌಡ ಸರ್ಕಲ್, ಐದು ಮೂಲೆ ವೃತ್ತಕ್ಕೆ ಬಹರ್ ?ಾ ವಲಿ ಸರ್ಕಲ್ , ಅರ್ಕೇಶ್ವರ ಕಾಲೋನಿ ಮೇಲಿರುವ ವೃತ್ತಕ್ಕೆ ಹೈದರ್ ಆಲಿ ಸರ್ಕಲ್ ಎಂದು ಹೆಸರಿಡಲು ತೀರ್ಮಾನಿಸಲಾಯಿತು.



ಬೀಡಿ ಕಾಲೋನಿ ವೃತ್ತಕ್ಕೆ ಹಾಜಿ ಸೈಯದ್ ಜಿಯಾವುಲ್ಲಾ ಸರ್ಕಲ್ , ಇಂದಿರಾ ಕ್ಯಾಂಟಿನ್ ವೃತಕ್ಕೆ ಸೈಯದ್ ಅಹಮದ್ ಆಗಾ ಸರ್ಕಲ್, ಜಯಭಾರತ್ ಟೆಂಟ್ ವೃತ್ತಕ್ಕೆ ಎಪಿಜೆ ಅಬ್ದುಲ್ ಕಲಾಂ ಸರ್ಕಲ್, ಹಾಜಿನಗರಕ್ಕೆ ಸೈಯದ್ ಹಾಜಿ ಮುನೀರ್ , ಆಂಜನೇಯ ಆರ್ಚ್ ವೃತ್ತಕ್ಕೆ ಸಿ. ಎಂ.ಲಿಂಗಪ್ಪ ಸರ್ಕಲ್ , ಪ್ಯಾರಿ ಫಯಾಜ್ ಮನೆ ರಸ್ತೆಯ ವೃತ್ತಕ್ಕೆ ಬಿಸ್ಮಿಲ್ಲಾ ಸರ್ಕಲ್ , ಬಿಳಗುಂಬ ರಸ್ತೆ ವೃತ್ತಕ್ಕೆ ಮಂಜುನಾಥ ಸರ್ಕಲ್ , ನೂರಿ ಸರ್ಕಲ್ ಗೆ ನೂರಾನಿ ಸರ್ಕಲ್ ಹೆಸರನ್ನು ನಾಮಕರಣ ಮಾಡಲು ನಿರ್ಧರಿಸಲಾಯಿತು.ಭವಾನಿ ನರ್ಸಿಂಗ್ ಹೋಮ್ ವೃತ್ತಕ್ಕೆ ಶ್ರೀ ಶಿವಕುಮಾರ ಸ್ವಾಮೀಜಿ ಸರ್ಕಲ್, ಮುಖ್ಯ ರಸ್ತೆಯಲ್ಲಿ ಎಂ.ಜಿ.ರಸ್ತೆ ಮತ್ತು ಮಂಡಿಪೇಟೆ ರಸ್ತೆ ಗಳು ಕೂಡುವ ವೃತ್ತಕ್ಕೆ ನಾಲ್ವಡಿ ಕೃಷ್ಣರಾಜ ಒಡೆ ಯರ್ ಸರ್ಕಲ್, ಕನಕಪುರ ವೃತ್ತಕ್ಕೆ ಭಕ್ತ ಕನಕದಾಸ ಸರ್ಕಲ್, ಮೈನ್ ಸ್ಕೂಲ್ ರಸ್ತೆಯ ವೃತ್ತಕ್ಕೆ ಜಿ.ಬಿ. ರಾಜರತ್ನಂ ಸರ್ಕಲ್, ಚಾಮುಂಡೇಶ್ವರಿ ದೇವಾ ಲಯ ಬಳಿಯ ವೃತ್ತಕ್ಕೆ ಎ.ಎಂ.ವೆಂಕಟರಾಮಯ್ಯ ಸರ್ಕಲ್, ಸಂತು ಬಾರ್ ಪಕ್ಕದ ರಸ್ತೆಯ ವೃತ್ತಕ್ಕೆ ಕುವೆಂಪು ಸರ್ಕಲ್ ಎಂದು ಹೆಸರಿಡಲು ತೀರ್ಮಾ ನಿಲಾಯಿತು. ಐಜೂರು ವೃತ್ತಕ್ಕೆ ಜಗಜ್ಯೋತಿ ಬಸವಣ್ಣ ಸರ್ಕಲ್, ಪಿಡಬ್ಲ್ಯೂಡಿ ವೃತ್ತಕ್ಕೆ ದೇವರಾಜ ಅರಸು ಸರ್ಕಲ್, ರೋಟರಿ ವೃತ್ತಕ್ಕೆ ಸ್ವಾಮಿ ವಿವೇಕಾನಂದ ಸರ್ಕಲ್, ಗಾಂಧಿನಗರದ ವೃತ್ತಕ್ಕೆ ದಲಿತ ಕವಿ ಸಿದ್ದಲಿಂಗಯ್ಯ, ವಾಟರ್ ಟ್ಯಾಂಕ್ ವೃತ್ತಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಹೆಸರನ್ನು ನಾಮಕರಣ ಮಾಡುವ ನಿರ್ಧಾರ ಕೈಗೊಳ್ಳಲಾಯಿತು.

ಪೊಲೀಸ್ ಠಾಣೆಯ ಮಂಡಿಪೇಟೆ ರಸ್ತೆಯಿಂದ ಹಳೇ ಸರ್ಕಾರಿ ಆಸ್ಪತ್ರೆ ರಸ್ತೆಗೆ ಎ.ಕೆ.ಅಬ್ದುಲ್ ಸಮದ್ ರಸ್ತೆ, ಕೇಕ್ ವರ್ಲ್ಡ್ ಪಕ್ಕದ ರಸ್ತೆಗೆ ಶ್ರೀ ಮಲ್ಲೇಶ್ವರ ಸ್ವಾಮಿ ರಸ್ತೆ , ವಿದ್ಯಾಪೀಠ ಪಕ್ಕದ ರಸ್ತೆಗೆ ನಾಗೇಶ್ ಹತ್ವಾರ್ ರಸ್ತೆ ಎಂದು ನಾಮಕರಣ ಮಾಡಲು ಸರ್ವ ಸದಸ್ಯರು ಸಮ್ಮತಿ ಸೂಚಿಸಿದರು.

# ಕುಡಿಯುವ ನೀರಿನ ಬಾಕಿ 22 ಕೋಟಿ

## ಸರ್ಕಾರ ಮನ್ನ ಮಾಡದಿದ್ದರೆ ಗ್ರಾಹಕರಿಂದಲೇ ವಸೂಲಿ । ನಗರಸಭೆ ಸಾಮಾನ್ಯ ಸಭೆಯಲ್ಲಿ ನಿರ್ಣಯ

ರಾಮನಗರ: ನಗರಸಭಾ ವ್ಯಾಪ್ತಿಯಲ್ಲಿನ ನೀರಿನ ಹಳೆ ಬಿಲ್ ಬಾಕಿ ಅಥವಾ ಬಡ್ಡಿ ಮನ್ನಾ ಮಾಡುವಂತೆ ಈ ಹಿಂದೆಯೇ ನಗರಸಭೆಯಲ್ಲಿ ನಿರ್ಣಯ ಕೈಗೊಂಡು ರಾಜ್ಯಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಆದರೆ, ಸರ್ಕಾರ ಯಾವುದೇ ನಿರ್ಣಯ ಕೈಗೊಂಡಿಲ್ಲ. ನೀರು ಸರಬರಾಜು ನಿರ್ವಹಣೆ ಮಾಡಬೇಕಾದರೆ ಹಳೇ ಬಿಲ್ ವಸೂಲಿ ಅನಿವಾರ್ಯ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರಸಭೆಯ ಪ್ರಶಸ್ತಿ ಭವನದಲ್ಲಿ ನಡೆದ ನಗರಸಭೆಯ ಸಾಮಾನ್ಯ ಸಭೆಯಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಜಲಮಂಡಳಿಯಿಂದ ನಗರಸಭೆಗೆ ಹಸ್ತಾಂತರಿಸುವ ವಿಚಾರ ಪ್ರಸ್ತಾಪವಾದಾಗ ನೀರಿನ ಬಾಕಿಯ ಬಗ್ಗೆ ಚರ್ಚೆಗೆ ಬಂದಿತು. ಬಾಕಿ ಮತ್ತು ಬಡ್ಡಿಯನ್ನು ಮನ್ನಮಾಡಿಸಲು ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳುವ ಸಲಹೆ ನೀಡಿದಾಗ ಅವರು ಹೀಗೆ ಪ್ರತಿಕ್ರಿಯಿಸಿದರು.

ನೀರಿನ ಶುಲ್ಕ ಹಳೆಯ ಬಾಕಿ ಬಡ್ಡಿ ಸೇರಿ 21.99 ಕೋಟಿ ರೂ ಗ್ರಾಹಕರಿಂದ ಬರಬೇಕಾಗಿದೆ. ಇಷ್ಟು ಹಣವನ್ನು ಮನ್ನ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡೋಣ ಇದಕ್ಕೆ ನಿಯೋಗದಲ್ಲಿ ಮುಖ್ಯಮಂತ್ರಿಗಳ ಬಳಿ ತೆರಳೋಣ ಎಂದು ವಿರೋಧ ಪಕ್ಷಗಳು ನೀಡಿದ ಸಲಹೆಗೆ ಆಡಳಿತ ಪಕ್ಷದ ಸದಸ್ಯರು ಜನರಿಂದಲೇ ಬಾಕಿ ವಸೂಲಿ ಮಾಡೋಣ ಎಂದರು.

ಕೆ.ಶೇಷಾದ್ರಿರವರು, ಈ ಫುಡ್ ಸ್ಟ್ರೀಟ್ ನಿರ್ಮಾಣಕ್ಕೆ ಸುಮಾರು 80 ಲಕ್ಷ ರುಪಾಯಿ ಖರ್ಚಾಗಿದೆ. ಅಷ್ಟೂ ಹಣವೂ ಸಂಗ್ರಹ ಆಗಬೇಕಿದೆ. ಠೇವಣಿಗಾಗಿ ಬಹಿರಂಗ ಹರಾಜು ಮಾಡಿದರೆ ಹಣ ಉಳ್ಳವರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಇದಕ್ಕೆ ಅವಕಾಶ ನೀಡದೆ ಮುಂಗಡ ದರ 2 ಲಕ್ಷ 25 ಸಾವಿರ ನಿಗದಿ ಪಡಿಸೋಣ, ಮಾಸಿಕ ಬಾಡಿಗೆ ದರ ಕನಿಷ್ಠ 3,460 ರು.ಗಳಿಂದ 5 ಸಾವಿರ ರು.ಗಳಿದೆ. ಬಹಿರಂಗ ಹರಾಜಿನಲ್ಲಿ ಪಾಲ್ಗೊಳ್ಳುವವರು ತಮ್ಮ ಆರ್ಥಿಕ ಅನುಕೂಲಕ್ಕೆ ತಕ್ಕಂತೆ ಬಾಡಿಗೆ ದರಕ್ಕೆ ಬಿಡ್ ಕೂಗಲಿ ಎಂದು ನೀಡಿದ ಸಲಹೆಗೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಮಹಮ್ಮದ್ ಆರೀಫ್ ಉಪಸ್ಥಿತರಿದ್ದರು.

### ಕಂದಾಯ ಕಟ್ಟಿದ್ದರೆ ಮಾತ್ರ ನೀರಿನ ಸಂಪರ್ಕ!

ನಗರದಲ್ಲಿರುವ ಫಿಲೇಚರಿಗಳ ನೀರಿನ ಸಂಪರ್ಕವನ್ನು ವಾಣಿಜ್ಯದ ಬದಲಿಗೆ ಗೃಹೇತರ ಬಳಕೆಗೆ ಸೇರಿಸಲು ಹಾಗೂ ಇನ್ನು ಮುಂದೆ ಮನೆಗಳಿಗೆ ನೀರಿನ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದವರು ಕಂದಾಯ ಶಾಖೆಯಲ್ಲಿ ಆಸ್ತಿ ತೆರಿಗೆ ಪಾವತಿಸಿರುವುದಕ್ಕೆ ನಿರಪೇಕ್ಷಣ ಪ್ರಮಾಣ ಪತ್ರ ಪಡೆಯಬೇಕೆಂಬ ಕೆ.ಶೇಷಾದ್ರಿರವರ ಪ್ರಸ್ತಾಪಕ್ಕೆ ಸದಸ್ಯರೆಲ್ಲರು ಒಪ್ಪಿಗೆ ಸೂಚಿಸಿದರು.



### ಶಾಸಕರ ನೇತೃತ್ವದಲ್ಲಿ ಸಿಎಂ ಬಳಿಗೆ ನಿಯೋಗ: ರಮೇಶ್

ಈ ವೇಳೆ ನಗರಸಭಾ ಸದಸ್ಯ ರಮೇಶ್ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರು ಕನಕಪುರ ನಗರಸಭೆಯಲ್ಲಿ ನೀರಿನ ಬಾಕಿ ಮನ್ನಾ ಮಾಡಿದ್ದಾರೆ. ಅದೇ ರೀತಿ ರಾಮನಗರ ಕ್ಷೇತ್ರ ಶಾಸಕ ಇಕ್ಬಾಲ್ ಹುಸೇನ್ ರವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಹಳೇ ಬಿಲ್ ಬಾಕಿ ಮನ್ನಾ ಮಾಡಿಸುವುದಾಗಿ ಭರವಸೆ ನೀಡಿದ್ದಾರೆ. ಹಳೆ ಬಿಲ್ ಬಾಕಿ ಮನ್ನಾ ಆದ ಮೇಲೆ ನಗರಸಭೆ ನೀರು ಸರಬರಾಜು ಜವಾಬ್ದಾರಿ ವಹಿಸಿಕೊಂಡರೆ ಸೂಕ್ತ ಎಂದು ಸಲಹೆ ನೀಡಿದರು. ಸರ್ಕಾರದಿಂದ ಮನ್ನಾ ಆಗದಿದ್ದರೆ ಏನು ಮಾಡಬೇಕು ಎಂಬ ಕೆ.ಶೇಷಾದ್ರಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಮೇಶ್, ಶಾಸಕರು ಮನ್ನಾ ಮಾಡಿಸುವುದಾಗಿ ಹೇಳಿದ್ದಾರೆ. ಜನರಿಗೆ ಒಳ್ಳೆಯದಾಗುವುದಾದರೆ ಶಾಸಕರೊಂದಿಗೆ ನಗರಸಭಾ ಸದಸ್ಯರು ನಿಯೋಗದಲ್ಲಿ ತೆರಳಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಒತ್ತಾಯ ಮಾಡೋಣ ಎಂದರು.

ಇದಕ್ಕೆ ಮತ್ತೆ ಪ್ರತಿಕ್ರಿಯಿಸಿದ ಅಧ್ಯಕ್ಷರು, ಬಾಕಿ ಮನ್ನಾವನ್ನು ಸರ್ಕಾರವೇ ತೀರ್ಮಾನ ಮಾಡಬೇಕು. ಶಾಸಕರು ಶಿಫಾರಸ್ಸು ಮಾಡಬಹುದೇ ಹೊರತು, ಅವರಿಂದ ಮನ್ನಾ ಮಾಡಲಾಗದು. 456 ಕೋಟಿ ವೆಚ್ಚದ ನೆಟ್ಕಲ್ ಯೋಜನೆ ನಿರ್ವಹಣೆ ಮಾಡಬೇಕೆಂದರೆ ಹಳೇ ಬಾಕಿ ವಸೂಲಿ ಆಗಲೇ ಬೇಕು. ಎಲ್ಲವನ್ನೂ ಮನ್ನಾ ಮಾಡುತ್ತಾ ಹೋದರೆ ನಗರಸಭೆಯನ್ನು ನಡೆಸುವುದು ಹೇಗೆ. ಮನ್ನಾ ಮಾಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸೋಣ, ಸಾಧ್ಯವಾಗದಿದ್ದರೆ ಜನರಿಂದ ಕಟ್ಟಿಸೋಣ ಎಂದು ಹೇಳಿದರು.

### ಫುಡ್ ಸ್ಟ್ರೀಟ್ ಮಳಿಗೆಗಳಿಗೆ 2.25 ಲಕ್ಷ ಮುಂಗಡ ದರ

ಬೆಂ-ಮೈಸೂರು ಹೆದ್ದಾರಿಯಲ್ಲಿ ಯುನಿಲೆಟ್ ಮಳಿಗೆಯ ಎದುರಿಗೆ ನಗರಸಭೆ ನಿರ್ಮಿಸಿರುವ ಫುಡ್ ಸ್ಟ್ರೀಟ್ ಮಳಿಗೆಗಳ ದರ ನಿಗದಿ ವಿಚಾರ ಚರ್ಚೆಗೆ ಬಂದಾಗ ಆಯುಕ್ತ ಡಾ. ಜಯಣ್ಣ, ವಿವಿಧ ಅಳತೆಯ 37 ಮಳಿಗೆಗಳನ್ನು ನಿರ್ಮಿಸ ಲಾಗಿದ್ದು, ಸರ್ಕಾರದ ನಿಯಮದಂತೆ ಒಂದು ಅಂಗಡಿಗೆ ಬಡ್ಡಿ ರಹಿತ ಮರುಪಾವತಿ ಠೇವಣಿ ಮತ್ತು ಬಾಡಿಗೆ ದರ ಪಟ್ಟಿ ಸಿದ್ಧಪಡಿಸಲಾಗಿದೆ. ಇದಕ್ಕೆ ಸಭೆ ಒಪ್ಪಿಗೆ ಸೂಚಿಸಿದರೆ ಜಿಲ್ಲಾಧಿಕಾರಿ ಗಳ ಅನುಮೋದನೆ ಪಡೆದು ಬಹಿರಂಗ ಹರಾಜು ನಡೆಸಬಹುದು ಎಂದು ಹೇಳಿದರು.

### ನೀರು ಸರಬರಾಜು, ನಗರಸಭೆಗೆ - ಜಂಟಿ ಸಮಿತಿ ರಚನೆ - ಕೆ.ಶೇಷಾದ್ರಿ

ನೀರು ಸರಬರಾಜು ಜವಾಬ್ದಾರಿಯನ್ನು ನಗರಸಭೆಗೆ ವಹಿಸಿಕೊಳ್ಳುವ ವಿಚಾರದಲ್ಲಿ ನಡೆದ ಚರ್ಚೆಯ ವೇಳೆ ಮಾತನಾಡಿದ ಅಧ್ಯಕ್ಷ ಕೆ.ಶೇಷಾದ್ರಿ, ಇಂದಲ್ಲ ನಾಳೆ ವಹಿಸಿಕೊಳ್ಳಲೇ ಬೇಕಿದೆ. ಈ ಬಗ್ಗೆ ನಗರಸಭೆ ಮತ್ತು ಜಲಮಂಡಳಿ ಅಧಿಕಾರಿಗಳನ್ನು ಒಳಗೊಂಡಂತೆ ಜಂಟಿ ಸಮಿತಿ ರಚನೆ ಮಾಡೋಣ. ಆ ಸಮಿತಿಯಲ್ಲಿ ನಗರಸಭಾ ಸದಸ್ಯರು ಇರಲಿ. ಮೊದಲು ಟಿಕೆ ಹಳ್ಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸೋಣ ಎಂದರು.

# ಸುಪ್ರೀಂನಲ್ಲಿ ಜಯ: ಹೋರಾಟ ಕೈಬಿಡಿ

## ಮೇಕೆದಾಟು ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮ್ರ ವಿನಂತಿ

ಮೈಸೂರು: ಮೇಕೆದಾಟು ಯೋಜನೆಯ ವಿಚಾರದಲ್ಲಿ ರಾಜ್ಯಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಈಗಾಗಲೇ ಜಯ ಸಿಕ್ಕಿದೆ. ಪ್ರಸ್ತುತ ಕಬಿನಿ ಜಲಾಶಯ ಸಂಪೂರ್ಣವಾಗಿ ಭರ್ತಿಯಾಗುತ್ತಿದ್ದು, ಅಣೆಕಟ್ಟು ತುಂಬಿದಾಗ ನೀರನ್ನು ತಡೆದು ಹಿಡಿದಿಡಲು ಸಾಧ್ಯವಿಲ್ಲ. ಆದ್ದರಿಂದ ತಮಿಳುನಾಡಿಗೆ ನೀರು ಬಿಡಬಾರದು ಎಂದು ಮಾಡುತ್ತಿರುವ ಹೋರಾಟವನ್ನು ಕೈಬಿಡುವಂತೆ ನಮ್ರತೆಯಿಂದ ಮನವಿ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕಾವೇರಿ ನೀರು ಹಂಚಿಕೆ ಹಾಗೂ ಹೋರಾಟಗಳ ಕುರಿತು ಪ್ರತಿಕ್ರಿಯಿಸಿದ ಅವರು, ಕಬಿನಿ ಜಲಾಶಯಕ್ಕೆ 40 ಸಾವಿರ ಕ್ಯೂಸೆಕ್ಸ್ ಒಳಹರಿವು ಇರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪ್ರಕೃತಿಯ ನಿಯಮದಂತೆ ಜಲಾಶಯ ತುಂಬಿದಾಗ ನೀರು ಹರಿಸಲೇಬೇಕಾಗುತ್ತದೆ. ಹೋರಾಟಗಾರರು ನೀರು ಹರಿಯುವ ಜಾಗಕ್ಕೆ ತೆರಳಿ ತಮ್ಮ ಪ್ರಾಣಕ್ಕೆ ಅಪಾಯ ತಂದುಕೊಳ್ಳಬಾರದು ಹಾಗೂ ನೀರಿಗೆ ಅಡ್ಡ ಮಲಗುವ ಸಾಹಸಕ್ಕೆ ಕೈಹಾಕಬಾರದು ಎಂದು ಮನವಿ ಮಾಡಿದರು.





### ಪ್ರಜಾಪ್ರಭುತ್ವ, ಕಾವೇರಿ ವಿವಾದದ ಹಿನ್ನೆಲೆ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರ ಪ್ರತಿಭಟನೆಗೂ ಗೌರವವಿದೆ, ಆದರೆ ಪ್ರಸ್ತುತ ಸಂದರ್ಭದಲ್ಲಿ ಹೋರಾಟ ಹಾಗೂ ಬಂದ್ ಆಯೋಜಿಸುವುದು ಸೂಕ್ತವಲ್ಲ ಎಂದು ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು. ಹಿಂದೆ ಬಂಗಾರಪ್ಪ, ಎಸ್.ಎಂ.ಕೃಷ್ಣ, ಸಿದ್ದರಾಮಯ್ಯ ಹಾಗೂ ದೇವೇಗೌಡರ ಆಡಳಿತಾವಧಿಯಲ್ಲೂ ಇಂತಹ ಕಾವೇರಿ ಸಂಕಷ್ಟಗಳು ಎದುರಾಗಿದ್ದವು. ತಮಿಳುನಾಡಿಗೆ 177 ಟಿಎಂಸಿ ನೀರನ್ನು ಹರಿಸಬೇಕು ಎನ್ನುವ ನ್ಯಾಯಾಲಯದ ಆದೇಶಕ್ಕೆ ಗೌರವ ನೀಡುವ ಜೊತೆಗೆ ರಾಜ್ಯದ ರೈತರ ಹಿತಾಸಕ್ತಿಯನ್ನು ಕಾಯಲು ಸರ್ಕಾರ ಬದ್ಧವಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ನಮ್ಮ ಮನವಿಯನ್ನು ಪುರಸ್ಕರಿಸಿ ಈ ಬಾರಿ ಅರ್ಧದಷ್ಟು ನೀರನ್ನು ಸಹ ಬಿಡುಗಡೆ ಮಾಡಲು ಸೂಚಿಸಿಲ್ಲ. ಈ ಹಿಂದೆ 9 ಸಾವಿರ ಕ್ಯೂಸೆಕ್ಸ್ ನೀರಿಗೆ ಬೇಡಿಕೆ ಇಟ್ಟಿದ್ದಾಗ, ಪ್ರಾಧಿಕಾರವು ಕೇವಲ 3,500 ಕ್ಯೂಸೆಕ್ಸ್ ನೀರು ಹರಿಸಲು ಆದೇಶಿಸಿದೆ ಎಂದು ಸ್ಪಷ್ಟಪಡಿಸಿದರು.

### ರಾಜಕೀಯ ಟೀಕೆಗಳು ತುಂಗಭದ್ರಾ ತೀರ್ಮಾನ

ವಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ನ ನಾಯಕರು ಕಾವೇರಿ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ ಎಂದು ಟೀಕಿಸಿದ ಅವರು, ಸಂಸತ್ತಿನಲ್ಲಿ ಅವರವರ ಜಾಗದಲ್ಲಿ ಸಮತೋಲಿತ ಅಣೆಕಟ್ಟು ನಿರ್ಮಿಸಿಕೊಳ್ಳುವ ಕುರಿತು ಈಗಾಗಲೇ ಕಾನೂನಾತ್ಮಕ ಸ್ಪಷ್ಟನೆ ಸಿಕ್ಕಿದೆ ಎಂದರು. ಇನ್ನು ತುಂಗಭದ್ರಾ ಜಲಾಶಯದ ವಿಚಾರದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ನೇತೃತ್ವದಲ್ಲಿ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಸಭೆ ನಡೆಸಿ ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಸಮಿತಿ ರಚಿಸಲು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದಾರೆ ಎಂದು ಮಾಹಿತಿ ನೀಡಿದರು. ಇದೇ ವೇಳೆ ತಮಿಳುನಾಡು ಮುಖ್ಯಮಂತ್ರಿಗಳ ರಾಜ್ಯ ಭೇಟಿಯ ಕುರಿತು ಮಾತನಾಡಿ, ವಾತಾವರಣ ತಿಳಿಯಾದ ನಂತರ ಸೌಹಾರ್ದಯುತ ಮಾತುಕತೆಗೆ ದಿನಾಂಕ ನಿಗದಿಪಡಿಸಲಾಗುವುದು ಎಂದರು.

### ಮೈಸೂರು ಭೇಟಿ, ಮಹಾರಾಜರ ಸ್ಮರಣೆ

ಮುಖ್ಯಮಂತ್ರಿಯಾದ ಬಳಿಕ ಶುಭ ಮುಹೂರ್ತದಲ್ಲಿ ಮೊದಲ ಬಾರಿಗೆ ಮೈಸೂರಿಗೆ ಭೇಟಿ ನೀಡಿದ್ದು, ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆಯುವುದಾಗಿ ತಿಳಿಸಿದರು. ಮೈಸೂರಿನ ನೆಲದಿಂದ ಸ್ವಾಮಿ ವಿವೇಕಾನಂದರು ನೀಡಿದ ಸಂದೇಶ ಹಾಗೂ ಮೈಸೂರು ಮಹಾರಾಜರು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಯಾರೂ ಮರೆಯಲು ಸಾಧ್ಯವಿಲ್ಲ. 'ಇತಿಹಾಸ ಮರೆತವನು ಎಂದಿಗೂ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ' ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ನುಡಿಯಂತೆ ರಾಜ್ಯದ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು.



### ಮೈಸೂರಲ್ಲಿ ಡಿಕೆಶಿಗೆ ಅದ್ದೂರಿ ಸ್ವಾಗತ

ಮೈಸೂರು: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸಾಂಸ್ಕೃತಿಕ ನಗರಿ ಮೈಸೂರಿಗೆ ಮೊದಲ ಬಾರಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಗೆ ಭರ್ಜರಿ ಸ್ವಾಗತ ಕೋರಲಾಯಿತು.

ನಗರದ ಮಂಡಕಳ್ಳಿ ಹೆಲಿಪ್ಯಾಡ್‌ಗೆ ಇಡೀ ಕಾಂಗ್ರೆಸ್ ನಾಯಕರ ದಂಡು ಹರಿದು ಬಂದಿತು. ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಪುಟ್ಟಸಿದ್ದಶೆಟ್ಟಿ, ಡಿ. ರವಿಶಂಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಸೇರಿ ಅನೇಕರು ಹೂ ಗುಚ್ಛ ನೀಡಿ ಬರ ಮಾಡಿಕೊಂಡರು. ಬಳಿಕ ಚಾಮುಂಡಿ ಬೆಟ್ಟಕ್ಕೆ ತೆರಳಿ ಮರಳಿದ ಡಿ.ಕೆ.ಶಿವಕುಮಾರ್ ಅವರಿಗೆ ರೇಸ್ ಕೋರ್ಸ್ ರಸ್ತೆಯಲ್ಲಿ ಮೂರು ಬೃಹತ್ ಹಾರಗಳನ್ನು ಹಾಕಿ ಸ್ವಾಗತಿಸಿದ್ದು ವಿಶೇಷ. ಈ ವೇಳೆ ಕಾಂಗ್ರೆಸ್ ಮುಖಂಡರಾದ ಅಬ್ದುಲ್ಲಾ, ನವೀನ್ ಕುಮಾರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶ್ರೀನಾಥ್ ಬಾಬು, ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಮಹೇಶ್ ಸೇರಿ ಅನೇಕರು ಇದ್ದರು.

### ಪ್ರಾರ್ಥನೆ..ಫಲ...ಸ್ಮರಣೆ

ನಾಡಿನ ಅಧಿದೇವತೆ ಶಕ್ತಿ ದೇವತೆಯಾದ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಂದು ಶಕ್ತಿ ದೇವತೆಯ ಸನ್ನಿಧಿಯಲ್ಲಿ ನಿಂತು ಹೇಳಿದ್ದೆ, ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗಲ್ಲ ಎಂದು ಅದು ಇಂದು ಫಲ ಕೊಟ್ಟಿದೆ. ಹೀಗಾಗಿ ವಿಶೇಷಪೂಜೆ ಸಲ್ಲಿಸಿದ್ದೇನೆ. ಅಲ್ಲದೆ, ನಾನು ಬಂದ ಶುಭಗಳಿಗೆ ಕಬಿನಿ ಅಣೆಕಟ್ಟು ಭರ್ತಿ ಆಗಿರುವ ಸುದ್ದಿ ಬಂದಿದೆ. ಅಲ್ಲದೆ, ಕಾವೇರಿ ಕಣಿವೆಯಲ್ಲೂ ಮಳೆಯಾಗುತ್ತಿದೆ. ವರುಣ ಕೃಪೆ ಫಲ ಸಿಕ್ಕರೆ ಇಡೀ ನಾಡೇ ಸಮೃದ್ಧಿಯಾಗಲಿದೆ ಎಂದು ಸಂತಸ ಪಟ್ಟರು.

# ದ್ರಾಕ್ಷಿ ತೋಟ: ಪ್ರವಾಸಿಗರ ಆಕರ್ಷಣೆ

▸▸ ಮಲ್ಲೇಶ್ ವೀರನಪುರ

ಗುಂಡ್ಲುಪೇಟೆ: ತಾಲ್ಲೂಕಿನ ಗುಂಡ್ಲುಪೇಟೆ?ಕೇರಳ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಒಂದು ಎಕರೆ ವಿಸ್ತೀರ್ಣದ ದ್ರಾಕ್ಷಿ ತೋಟವು ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿ ಹೊರಹೊಮ್ಮಿದೆ. ಕೇರಳ ಮೂಲದ ಅಶ್ರಫ್ ಅವರು ಅಭಿವೃದ್ಧಿಪಡಿಸಿರುವ ಈ ತೋಟಕ್ಕೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಿದ್ದಾರೆ.

ದ್ರಾಕ್ಷಿ ತೋಟದ ಜೊತೆಗೆ ಚೆಂಡುಮಲ್ಲಿಗೆ ಹೂವಿನ ಬೆಳೆ, ವಿವಿಧ ಜಾತಿಯ ಹಣ್ಣಿನ ಗಿಡಗಳು ಹಾಗೂ ಹಸಿರು ಪರಿಸರ ಪ್ರವಾಸಿಗರನ್ನು ಸೆಳೆಯುತ್ತಿವೆ. ಸೆಲ್ಫಿ ಮತ್ತು ಫೋಟೋಶೂಟ್‌ಗೆ ಸೂಕ್ತವಾದ ವಾತಾವರಣ ಇರುವುದರಿಂದ ಯುವಕರು, ಕುಟುಂಬಗಳು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಸಾಮಾಜಿಕ ಜಾಲ ತಾಣಗಳಿಗಾಗಿ ರೀಲ್ಸ್ ಮತ್ತು ವಿಡಿಯೊ ಚಿತ್ರೀಕರಣವೂ ಇಲ್ಲಿ ಸಾಮಾನ್ಯವಾಗಿದೆ.



ತೋಟವನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ದ್ದೇಶದಿಂದ ಹಸುವಿನ ಫಾರಂ ಹಾಗೂ ವಿಲ್ಲಾ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇದು ಗ್ರಾಮೀಣ ಪ್ರವಾಸೋದ್ಯಮದ ಪ್ರಮುಖ ತಾಣವಾಗುವ ನಿರೀಕ್ಷೆಯಿದೆ ಎಂದು ತೋಟದ ಮಾಲೀಕ ಅಶ್ರಫ್ ತಿಳಿಸಿದ್ದಾರೆ.

### ಉದ್ಯೋಗ, ವ್ಯಾಪಾರಕ್ಕೂ ಉತ್ತೇಜನ

ತೋಟದ ನಿರ್ವಹಣೆಗೆ ಸ್ಥಳೀಯ ಕಾರ್ಮಿಕರಿಗೆ ಉದ್ಯೋಗ ನೀಡಲಾಗಿದ್ದು, ಐಸ್‌ಕ್ರೀಂ, ಹಣ್ಣು, ಎಳನೀರು ಸೇರಿದಂತೆ ವಿವಿಧ ವಸ್ತುಗಳ ಮಾರಾಟಕ್ಕೆ ಸ್ಥಳೀಯ ವ್ಯಾಪಾರಿಗಳಿಗೆ ಉಚಿತ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಸಣ್ಣ ವ್ಯಾಪಾರಿಗಳಿಗೆ ಉತ್ತಮ ಆದಾಯ ದೊರೆಯುತ್ತಿದೆ.

ಪ್ರತಿದಿನ ನೂರಾರು ವಾಹನಗಳು ಆಗಮಿಸುವ ಹಿನ್ನೆಲೆಯಲ್ಲಿ ತೋಟದ ಒಳಭಾಗದಲ್ಲಿಯೇ ವಿಶಾಲ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದ್ದು, ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಪ್ರವೇಶ ಶುಲ್ಕದ ಮೂಲಕವೂ ಉತ್ತಮ ಆದಾಯ ದೊರೆಯುತ್ತಿದ್ದು, ಪ್ರವಾಸಿಗರು ತೋಟದ ಸ್ವಚ್ಛತೆ, ನೈಸರ್ಗಿಕ ಸೌಂದರ್ಯ ಹಾಗೂ ವ್ಯವಸ್ಥೆಯನ್ನು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.



# ಧ್ರುವನಾರಾಯಣ್ ಒಬ್ಬ ಶ್ರೇಷ್ಠ ರಾಜನೀತಿ ತಜ್ಞ: ಚೆನ್ನಪ್ಪ

ಚಾಮರಾಜನಗರ, ದಿವಗಂತ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರು ಜಿಲ್ಲೆಯ ಚಹರೆ ಬದಲಾಯಿಸಿದಂತಹ ಒಬ್ಬ ಶ್ರೇಷ್ಠ ರಾಜನೀತಿ ತಜ್ಞ ಎಂದು ಸಾಹಿತಿ ಹನೂರು ಚೆನ್ನಪ್ಪ ಬಣ್ಣಿಸಿದರು..

ನಗರದ ರೋಟರಿ ಭವನದಲ್ಲಿ ಚೇತನ ಕಲಾವಾಹಿನಿ, ರೋಟರಿ ಸಂಸ್ಥೆ ವತಿಯಿಂದ ಆರ್.ಧ್ರುವನಾರಾಯಣ್ ರವರ 65ನೇ ಹುಟ್ಟುಹಬ್ಬ ಅಂಗವಾಗಿ ನಡೆದ ಚಾಮರಾಜನಗರ ಜಿಲ್ಲಾ ಬೌದ್ಧ ಕವಿಗೋಷ್ಠಿ, ಸೊಸ್ಲೆ ಗಂಗಾಧರ ವಿರಚಿತ ಬೋಧಿಸಂ ಪುಸ್ತಕ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಈ ಭಾಗದ ಜನತೆಗೆ ಏನು ಅವಶ್ಯಕತೆ ಇದೆ ಎಂಬುವುದನ್ನು ಅಧ್ಯಯನ ಮಾಡಿ ಅದಕ್ಕೆ ತಕ್ಕಂತೆ ಕ್ರಿಯಾಶೀಲ ರಾಜಕಾರಣಿಯಾಗಿದ್ದರು. ತಮ್ಮ ದಿನವನ್ನು ಜನರೊಟ್ಟಿಗೆ ಕಳೆದಂತಹ ಒಬ್ಬ ಶ್ರೇಷ್ಠ ರಾಜಕೀಯಪಟು. ಅವರ ಹೆಜ್ಜೆ ಗುರುತುಗಳು ಇಡೀ ಜಿಲ್ಲೆಯಲ್ಲಿ ಸಾರ್ಥಕತೆಯನ್ನು ಉಳಿಸಿಕೊಂಡಿವೆ. ಆಗಾಗಿ ಅವರ ಸ್ಮರಣೀಯ ಮಾಡುವಂತಹ ಈ ಕಾರ್ಯಕ್ರಮ ಅವಿಸ್ಮರಣೀಯ ಎಂದರು.



▸▸ ಚಾಮರಾಜನಗರ ಜಿಲ್ಲಾ ಬೌದ್ಧ ಕವಿಗೋಷ್ಠಿ, ಸೊಸ್ಲೆ ಗಂಗಾಧರ ವಿರಚಿತ ಬೋಧಿಸಂ ಪುಸ್ತಕ ಬಿಡುಗಡೆ

ಜಿಲ್ಲೆಯಲ್ಲಿ ಬೌದ್ಧ ವಿದ್ಯಾನಿಲಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದರು. ಅದನ್ನು ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ಮಾಡೋಣ. ಅಲ್ಲಿ ಎಲ್ಲ ರೀತಿಯ ಕೆಲಸಗಳನ್ನು ಮಾಡುವ ಮೂಲಕ ಜನತೆಗೆ ವಿಶೇಷ ಕೊಡುಗೆ ಕೊಡಬೇಕು ಎಂಬ ತುಡಿತ ಅವರಲ್ಲಿತ್ತು. ಆಗಾಗಿ ಅವರ ಹೆಜ್ಜೆ ಗುರುತು ಅಲ್ಲೂ ನೋಡಬಹುದು. ಜಿಲ್ಲೆಯ ಅಭಿವೃದ್ಧಿಯ ಜೊತೆಜೊತೆಗೆ ಕ್ಷೇತ್ರದ ಜನತೆಗೆ ಏನು ಬೇಕು ಎಂಬ ಹುಡುಕಾಟ ಇದೆಯಲ್ಲಿ ಅದು ನಿಜಕ್ಕೂ ಎಲ್ಲರಿಗೂ ಮಾದರಿ ಆಗಬೇಕು. ಆಗಾಗಿ ಅವರ ಒಂದು ಸ್ಮರಣೆ ಔಚಿತ್ಯ ಪೂರ್ಣ. ಅವರ ಹುಟ್ಟುಹಬ್ಬವನ್ನು ಬೌದ್ಧ ಕವಿಗೋಷ್ಠಿಯ ಮೂಲಕ ಆಚರಣೆ ಮಾಡುತ್ತಿರುವುದು ಹೆಮ್ಮೆ ಸಂಗತಿಯಾಗಿದೆ ಎಂದರು.

ಸಾಹಿತಿ ಸೋಸ್ಲೆ ಗಂಗಾಧರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಉಪನ್ಯಾಸಕ ಮೂಕಳ್ಳಿ ಬಸವಣ್ಣ ಆಶಯ ನುಡಿ ಮಾಡಿದರು.

ತಾ.ಪಂ.ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್ ಮಾತನಾಡಿದರು. ಕಾರ್ಯಕ್ರಮ ದಲ್ಲಿ ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ಕಾರ್ಯದರ್ಶಿ ಜಿ.ಅಂಕಶೆಟ್ಟಿ, ಚೇತನ ಕಲಾವಾಹಿನಿ ಜಿ.ರಾಜಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಮಂಜುನಾಥ್, ಜೆ.ಬಿ.ರಾಜೇಶ್, ಉಪನ್ಯಾಸಕ ಗುರುರಾಜು ಯರಗನಹಳ್ಳಿ, ಕವಿ ಡಾ.ಶಿವರಾಜು ಬೂದಿತಿಟ್ಟು, ಉಪನ್ಯಾಸಕ ಕುಮಾರ್ ಚಿಕ್ಕಹೊಳೆ, ಮಂಗಲ ಶಿವಣ್ಣ, ಎಂ.ಎನ್.ಮಹದೇವು, ಎಂ.ಪುಟ್ಟಸ್ವಾಮಿ, ಡಾ. ಮಹದೇವಕುಮಾರ್, ಡಾ.ಮಲ್ಲಿಕಾರ್ಜುನ ಇತರರು ಭಾಗವಹಿಸಿದ್ದರು.

# ಸಂಕಷ್ಟದ ಸಮಯದಲ್ಲಿ ನೆರವಾದ ಕಬಿನಿ

## ಈ ಬಾರಿ ತಡವಾಗಿ ಭರ್ತಿಯತ್ತ ಜಲಾಶಯ । ವಿವಾದಕ್ಕೆ ತಡೆಯಾಗುವ ನಿರೀಕ್ಷೆ

▸▸ ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ರಾಜ್ಯದಲ್ಲಿ ಮೊದಲು ಭರ್ತಿಯಾಗುವ ಜಲಾಶಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಕಬಿನಿ ಜಲಾಶಯ ಈ ಬಾರಿ ತಡವಾಗಿ ಭರ್ತಿಯಾಗುತ್ತಿದೆ.

ಆದರೂ ಕರ್ನಾಟಕ ಹಾಗೂ ತಮಿಳುನಾಡಿನ ಜಲ ವಿವಾದಕ್ಕೆ ತಾತ್ಕಾಲಿಕ ತಡೆ ನೀಡಿದ್ದಾಳೆ ಈ ಕಪಿಲೆ. 15 ದಿನಗಳ ಕಾಲ ತಮಿಳುನಾಡಿಗೆ 3.500 ಕ್ಯೂಸೆಕ್ ನೀರು ಬಿಡಬೇಕೆಂಬ ಕಾವೇರಿ ನೀರು ನಿರ್ವಹಣಾ ಮಂಡಳಿಯ ಆದೇಶದಿಂದ ರಾಜ್ಯದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಬರಗಾಲದ ಛಾಯೆ ಆವರಿಸಿರುವ ಬೆನ್ನಲ್ಲೇ ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ಎರಡು ರಾಜ್ಯಗಳ ನಡುವೆ ನೀರಿನ ಹಂಚಿಕೆ ವಿವಾದ ಮತ್ತೊಮ್ಮೆ ಉಲ್ಬಣಿಸುತ್ತಿರುವ ಬೆನ್ನಲೆ ಕಪಿಲಾ ನದಿಯ ಒಳಹರಿವಿನ ಪ್ರಮಾಣ ಹೆಚ್ಚಾಗಿ ಜಲಾಶಯ ಭರ್ತಿಯತ್ತ ಸಾಗಿ, ಹೊರಹರಿವಿನ ಪ್ರಮಾಣವೂ ಹೆಚ್ಚಳವಾಗುತ್ತಿದೆ.

ಇದರಿಂದ ನಿಟ್ಟುಸಿರು ಬಿಟ್ಟ ಅಧಿಕಾರಿಗಳು ಕಬಿನಿ ಜಲಾಶಯದ ಸಂರಕ್ಷಣಾ ದೃಷ್ಟಿಯಿಂದ ನೀರನ್ನು ಹೊರಬಿಡುತ್ತಿದ್ದಾರೆ.

ಇದರಿಂದ ಪ್ರತಿನಿತ್ಯ 3500 ಕ್ಯೂಸೆಕ್ ನೀರು ಬಿಡಬೇಕೆಂಬ ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶ ಪಾಲನೆ ಆದಂತಾಗಿದೆ.

2284ಅಡಿ ಸಾಮರ್ಥ್ಯದ ಜಲಾಶಯ ಗರಿಷ್ಠ ಮಟ್ಟ ತಲುಪುವ ಹಂತಕ್ಕೆ ಒಳ ಹರಿವು ಹೆಚ್ಚಾಗಿದ್ದು, ಕಬಿನಿ ಭರ್ತಿಯತ್ತ ಸಾಗುತ್ತಿದೆ. ಶನಿವಾರ 2281 ಅಡಿಗಳಷ್ಟು ನೀರು ಸಂಗ್ರವಾಗಿದೆ. ಬಹುತೇಕ ಎಲ್ಲ ವರ್ಷಗಳಲ್ಲಿಯೂ ಜೂ.,ಜುಲೈ ಮೊದಲ ವಾರದಲ್ಲಿ ಭರ್ತಿಯಾಗುತ್ತಿದ್ದ ಜಲಾಶಯ,



ಈ ವರ್ಷದ ವಾಡಿಕೆ ಹಾಗೂ ಮುಂಗಾರು ಮಳೆ ಕೈಕೊಟ್ಟಿರುವುದು, ಎಲ್ ನಿನೋ ಪರಿಣಾಮ ತಡವಾಗಿ, ಆಗಸ್ಟ್ ಮೊದಲ ದಿನ ಜಲಾಶಯ ತುಂಬುತ್ತಿದೆ. ವಯನಾಡು ಭಾಗದ ಮಳೆಯಿಂದ ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿದೆ.

ಜುಲೈ ತಿಂಗಳ ಕೊನೆಯ ಮೂರು ದಿನಗಳಲ್ಲಿ ಕೇರಳದ ವಯನಾಡು ಭಾಗದಲ್ಲಿ 40 ಮಿ.ಮೀ ಮಳೆಯಾಗಿದ್ದರೆ ಹೆಚ್.ಡಿ.ಕೋಟೆ ಭಾಗದ ನಾಗರಹೊಳೆ ಅಭಯಾರಣ್ಯ ವ್ಯಾಪ್ತಿಯಲ್ಲೂ ಮಳೆಯಾಗುತ್ತಿರುವುದರಿಂದ ಜಲಾಶಯಕ್ಕೆ ಹೆಚ್ಚಿನ ನೀರು ಸಂಗ್ರವಾಗುತ್ತಿದೆ.

ತಾಲೂಕಿನ ಬೀಚನಹಳ್ಳಿ ಸಮೀಪವಿರುವ ಕಬಿನಿ ಜಲಾಶಯ ನೀರಿನ ಗರಿಷ್ಠ ಮಟ್ಟ 2284 ಅಡಿಯಾಗಿದ್ದು, 19.5 ಟಿಎಂಸಿ ಸಾಮರ್ಥ್ಯ ಹೊಂದಿದೆ. ಮಳೆ ಹಿನ್ನೆಲೆ ಗುರುವಾರ 11 ಸಾವಿರ ಕ್ಯೂಸೆಕ್ ಹರಿದು ಬಂದರೆ, ಶನಿವಾರ ಮಧ್ಯಾಹ್ನದ ವೇಳೆಗೆ 16ಸಾವಿರ ಕ್ಯೂಸೆಕ್ ಕ್ಕೆಗೆ ಏರಿಕೆ ಆಗಿದೆ. ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆ 10 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿ ಬಿಡಲಾಗಿದೆ. ಕೇರಳದಲ್ಲಿ ಮಳೆ ಹೆಚ್ಚಳವಾಗಿರುವುದರಿಂದ ರೆಡ್ ಅಲರ್ಟ್ ಘೋಷಣೆಯಾಗಿದೆ.

ಈ ಬಾರಿಯ ಮುಂಗಾರು ಕೈ ಕೊಟ್ಟಿದ್ದರಿಂದ ಜೂ.ತಿಂಗಳಲಿನಲ್ಲಿ ಬರ ಆವರಿಸಿತ್ತು. ಕುಡಿಯುವ ನೀರಿಗೂ ಸಂಕಷ್ಟ ಎದುರಾಗಲಿದೆ ಎಂದು ಹವಾಮಾನ ಇಲಾಖೆ ಜೂನ್ ತಿಂಗಳಿಗೂ ಮೊದಲೇ ಎಚ್ಚರಿಸಿತ್ತು.

ಇದೀಗ, ರಾಜ್ಯದಾದ್ಯಂತ ಶೇ.28ರಷ್ಟು ಮಳೆ ಕೊರತೆಯಾಗಿದ್ದರೆ, ದಕ್ಷಿಣ ಒಳನಾಡಿನ ಮೈಸೂರು ಭಾಗದ ಮಳೆಯಲ್ಲಿ ಶೇ.36 ಕೊರತೆಯಾಗಿದೆ.


### ಕಬಿನಿ ಭಾಗದ ರೈತರಿಗೆ ಸಂಕಷ್ಟ

ಕಬಿನಿ ಜಲಾಶಯದ ನೀರನ್ನು ಅವಲಂಬಿಸಿ ಬಲದಂಡೆ ನಾಲೆಯ 108060 ಹೆಕ್ಟೇರ್, ಎಡದಂಡೆಯ 3 ಸಾವಿರ ಹೆಕ್ಟೇರ್ ಪ್ರದೇಶದ ರೈತರು ಬೆಳೆ ಬೆಳೆಯುತ್ತಿದ್ದರು. ಖಾರಿಫ್ ಬೆಳೆಗೆ ಕಬಿನಿ ಜಲಾಶಯದ ನೀರು ಪ್ರಮುಖವಾಗಿದ್ದು, ಬರದ ಹಿನ್ನೆಲೆ ಬೆಳೆ ಬೆಳೆಯಲು ನಾಲೆಗೆ ನೀರು ಹರಿಸುವುದನ್ನು ನಿಲ್ಲಿಸಿರುವ ಕಾವೇರಿ ನೀರಾವರಿ ನಿಗಮ, ಕುಡಿಯುವ ನೀರಿಗೆ ಕಾಯ್ದಿರಿಸಿಕೊಂಡಿತ್ತು. ಇದೀಗ, ಕಬಿನಿ ಜಲಾಶಯ ಭರ್ತಿ ಆಗುತ್ತಿದ್ದರೂ ಇಲ್ಲಿನ ಬೆಳೆಗಳಿಗೆ ನೀರು ಬಿಡುವ ಸಾಧ್ಯತೆ ತೀರಾ ಕಡಿಮೆ.ಇದರಿಂದ ಇಲ್ಲಿನ ರೈತರು ಸಂಕಷ್ಟಕ್ಕೆ ಸಿಲುಕಿದ್ದರೆ, ತಮಿಳುನಾಡಿನ ರೈತರ ಬೆಳೆಗಳಿಗೆ ನೀರು ಬಿಡುತ್ತಿರುವುದು ಸಹಜವಾಗಿ ಈ ಭಾಗದವರ ಆಕ್ರೋಶಕ್ಕೆ ಕಾರಣವಾಗಿದೆ.

ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯ

# ಅಹೋರಾತ್ರಿ ಧರಣಿ 4ನೇ ದಿನಕ್ಕೆ

**ಜಿಲ್ಲಾಧಿಕಾರಿ ಭೇಟಿ, ನೀರು ಬಿಡುವ ಭರವಸೆ। ಅಹೋರಾತ್ರಿ ಧರಣಿಗೆ ಬಿಜೆಪಿ ಬೆಂಬಲ । ಕೆರೆಗಳಿಗೆ ನೀರು ತುಂಬಿಸುವ ತನಕ ಅಹೋರಾತ್ರಿ ಧರಣಿ ಕೈ ಬಿಡಲ್ಲ ರೈತರು**



ಚಾಮರಾಜನಗರ, ಮೂರನೆಯ ಹಂತದ ಕೆರಗಳಿಗೆ ಕಳೆದ ಮೂರು ವರ್ಷಗಳಿಂದಲ್ಲೂ ನೀರು ತುಂಬಿಸುತ್ತಿಲ್ಲ ಎಂದು ಆರೋಪಿಸಿ ತಾಲೂಕಿನ ಮೂರನೆಯ ಹಂತದ ಅಚ್ಚಕಟ್ಟು ಗ್ರಾಮದ ರೈತರು ಗುಂಡ್ಲುಪೇಟೆ ತಾಲೂಕಿನ ಹುತ್ತೂರು ಪಂಪ್‌ಹೌಸ್ ಮುಂಭಾಗದಲ್ಲಿ ನಡೆಸುತ್ತಿರುವ

ಅಹೋರಾತ್ರಿ ಧರಣೆ ಸ್ಥಳಕ್ಕೆ ಜಿಲ್ಲಾಧಿಕಾರಿ ಶ್ರೀ ರೂಪ ಅಧಿಕಾರಿಗಳೊಂದಿಗೆ ಭೇಟಿ ನೀಡಿ ರೈತರ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿದರು. ಬಳಿಕ ಮಾತನಾಡಿದ ಅವರು, ಮೂರನೇ ಹಂತದ ಕೆರೆಗಳಿಗೆ ನೀರು ಭರವಸೆ ನೀಡಿದರು. ವಾರದೊಳಗೆ ನೀರಾವರಿ ನಿಗಮದ ಮುಖ್ಯ ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಭವನದಲ್ಲಿ ಸಭೆ ಕರೆಯಲಾಗುವುದು. ನೀವೆಲ್ಲರೂ ಸಭೆ ಬನ್ನಿ ಸಮಸ್ಯೆಗಳ ಬಗ್ಗೆ ಚರ್ಚಿ ಪರಿಹರಿಸೋಣ ಎಂದರು.

### ಬಿಜೆಪಿ ಬೆಂಬಲ

ಅಹೋರಾತ್ರಿಧರಣಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಬೇಂದ್ರಪ್ಪ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಜಿಲ್ಲಾ ಕಾರ್ಯದರ್ಶಿ ನಟರಾಜು ಇತರರು ಭಾಗವಹಿಸಿ ಬೆಂಬಲ ಸೂಚಿಸಿದರು.

ಬಿಜೆಪಿ ಜಿಲ್ಲಾ ವಕ್ತಾರ ಮನೋಜ್ ಪಟೇಲ್ ಮಾತನಾಡಿ, ಹುತ್ತೂರು ಪಂಪ್ ಹೌಸ್ ನಿಂದ ಚಾಮರಾಜನಗರ ತಾಲೂಕಿನ ಕೆರೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಆ ಭಾಗದ ರೈತರು ಹುತ್ತೂರು ಪಂಪ್ ಹೌಸ್ ಮುಂಭಾಗದಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿಗೆ ಬಿಜೆಪಿ ಬೆಂಬಲ ಸೂಚಿಸಿಸಿದೆ. ಅಧಿಕಾರಿಗಳು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಮೂರನೇ ಹಂತ ಕೆರೆಗಳಿಗೆ ನೀರು ಹರಿಸದೆ ನಾಲ್ಕನೆಯ ಹಂತದ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡುತಿದ್ದಾರೆ. ಇದು ಎಷ್ಟರ ಮಟ್ಟಿಗೆ ಹರಿ ಎಂದು ಪ್ರಶ್ನಿಸಿದರು. ಇದು ಸ್ಥಳೀಯ ಶಾಸಕರಿಗೆ ಇಚ್ಛೆ ಇಲ್ಲವೋ ಅಥವಾ ಗುಂಡ್ಲುಪೇಟೆ ಶಾಸಕರ ಪ್ರಭಾವ ಹೆಚ್ಚಾಗುತ್ತಿದಿಯೋ ಗೊತ್ತಿಲ್ಲ. ಕಾನೂನು ಪ್ರಕಾರ 1ನೇ ಹಂತ, 2ನೇ ಹಂತ, 3ನೇ ಹಂತ ಪ್ರಕಾರವೇ ಕರೆಗಳಿಗೆ ನೀರು ತುಂಬಿಸಲಿ ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಮಾತನಾಡಿ, ಹುತ್ತೂರು ಪಂಪ್‌ಹೌಸ್‌ನಿಂದ ಕೇವಲ ಮೂರನೇ ಹಂತದಲ್ಲಿ ಒಂದೇ ಒಂದು ಬಾರಿ ನೀರು ತುಂಬಿಸುವ ಕೆಲಸ ಮಾಡಿದರೆ ಅದನ್ನು ಬಿಟ್ಟರೆ ನೀರು ತುಂಬಿಸಿಲ್ಲ. ಒಂದುನೇ ಹಂತ, ಎರಡನೇ ಹಂತ, ಮೂರನೆಯ ಹಂತ ಬಿಟ್ಟು ಸ್ವಾರ್ಥ, ರಾಜಕಾರಣದಿಂದ 4ನೇ ಹಂತಕ್ಕೆ ನೀರು ಬಿಟ್ಟಿರುವುದು ರೈತ ಅಹೋರಾತ್ರಿ ಹೋರಾಟಕ್ಕೆ ಕಾರಣವಾಗಿದೆ. ಬರಗಾಲ ಕಾರಣದಿಂದ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿರುವ ಸಂದರ್ಭದಲ್ಲಿ 900, 100 ಅಡಿಗೆ ಅಂತರ್ಜಲ ಕುಸಿದಿದೆ. ಇದೇ ರೀತಿ ಆದರೆ ಜನ, ಜಾನುವಾರುಗಳು ಉಳಿಸಿಕೊಳ್ಳುವುದು ಕಷ್ಟಕರವಾಗಿದೆ. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ನೀರು ಬಿಡುವ ಭರವಸೆ ನೀಡಿದ್ದಾರೆ. ಅವರಿಗೆ ರೈತರ ಪರವಾಗಿ ಧನ್ಯವಾದ ಅರ್ಪಿಸುತ್ತೇವೆ ಎಂದರು.

ಕ್ಷೇತ್ರದ ಶಾಸಕರು ಮಂತ್ರಿಗಿರಿಗಾಗಿ ಪ್ರವಾಸಕ್ಕೆ ಹೋಗಿದ್ದಾರೆ. ಈ ಭಾಗದಲ್ಲಿ ರೈತರು ನೀರು ಇಲ್ಲದೆ... ತುಂಬಾ ತೊಂದರೆಯಲ್ಲಿದ್ದಾರೆ, ರೈತರ ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ತಾವು... ದಯಾಮಾಡಿ ನಿಮಗೆ ವೋಟ್ ಹಾಕಿದ ತಪ್ಪಿಗಾಗಿ ಕೆರೆಗಳಿಗೆ ನೀರು ತುಂಬಿಸಿ ರೈತರ ಹಿತಕಾಪಾಡುವಂತೆ ಮನವಿ ಮಾಡಿದರು.

ರೈತ ಮೋಹನ್ ರಾಜ್ ಮಾತನಾಡಿ, ಆಲಂಬೂರು ಏತ ಕುಡಿಯುವ ನೀರು ಯೋಜನೆಯಲ್ಲಿ ಮೂರನೆ ಹಂತದ ಕೊನೆಯ ಕೆರೆ ಅಮಚವಾಡಿ ಕೆರೆ. ಅಮಚವಾಡಿ ಅಚ್ಚುಕಟ್ಟು ಪ್ರದೇಶದಲ್ಲಿ ಸುಮಾರು 15 ಸಾವಿರ ಜನಸಂಖ್ಯೆ ಇದ್ದು, 8–10 ಸಾವಿರ ಜಾನುವಾರುಗಳಿವೆ. ಮೂರನೇಯ ಹಂತ ಅಚ್ಚಕಟ್ಟು ಪ್ರದೇಶದಲ್ಲಿ ಹುಮಾರು 40 ಸಾವಿರ ಜನಸಂಖ್ಯೆ ಇದ್ದು ಸುಮಾರು 25 ಸಾವಿರ ಜಾನುವಾರು ಇದೆ. ಎಂದು ಒತ್ತಾಯಿಸಿದರು.

ಹ್ಯಾಂಡ್ ಪೋಸ್ಟ್‌ನಲ್ಲಿ ನೂರಾರು ರೈತರಿಂದ ಪ್ರತಿಭಟನೆ

# ನಾಲೆಗಳಿಗೆ ನೀರು ಹರಿಸುವಂತೆ ರಸ್ತೆ ತಡೆ ಚಳುವಳಿ

ಎಚ್.ಡಿ.ಕೋಟೆ: ಕಾವೇರಿ ಪ್ರಾಧಿಕಾರದ ತೀರ್ಪನ್ನು ಧಿಕ್ಕರಿಸಿ ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿ ಕಬಿನಿ ಅಚ್ಚು ಕಟ್ಟು ವ್ಯಾಪ್ತಿಯ ನೂರಾರು ರೈತರು ಹ್ಯಾಂಡ್ ಪೋಸ್ಟ್ ಅಲ್ಲಿ ರಸ್ತೆ ತಡೆ ಚಳುವಳಿ ನಡೆಸಿ ಸರ್ಕಾರಕ್ಕೆ ಎಚ್ಚರಿಸಿದರು.

ಮುಂಗಾರು ಮಳೆಯಿಲ್ಲದೆ ಕಬಿನಿ ಅಚ್ಚುಕಟ್ಟು ರೈತರು ಸಂಕಷ್ಟದಲ್ಲಿದ್ದು, ದನ ಕುರುಗಳಿಗೆ ಕುಡಿಯುವ ನೀರು ಮೇವು ತುಂಬಾ ತೊಂದರೆಯಾಗಿದೆ ಕೆರೆಕ ಟ್ಟೆಗಳು ಒಣಗಿವೆ. ಇತ್ತೀಚೆಗೆ ಮಳೆಯಾಗಿ ಜಲಾಶಯ ತುಂಬುವತ್ತ ಸಾಗಿದೆ. ಈ ಕೂಡಲೇ ಕಬಿನಿ ಅಚ್ಚು ಕಟ್ಟು ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಹ್ಯಾಂಡ್ ಪೋಸ್ಟ್ ಬಳಿ ನೂರಾರು ರೈತರು ರಸ್ತೆ ತಡೆ ಚಳುವಳಿ ನಡೆಸಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕಾವೇರಿ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರ ಕೇವಲ ಸರ್ವ ಪಕ್ಷದ ಮುಖಂಡರನ್ನು ಕರೆದು ರಾಜಕಾರಣ ಮಾಡುತ್ತಿದೆ.




ಕೇವಲ ಸರ್ವ ಪಕ್ಷಗಳ ಸಭೆ ನಡೆಸಿದರೆ ರಾಜಕಾರಣವಾಗುತ್ತದೆ. ನೈಜ ಸಮಸ್ಯೆಯನ್ನು ಅರಿತಿರುವ ಕಾವೇರಿ ವ್ಯಾಪ್ತಿಯ ರೈತ ಮುಖಂಡರನ್ನ ನಿರ್ಲಕ್ಷಿಸಿದೆ. ಇದು ಸರಿಯಾದ ಕ್ರಮ ಅಲ್ಲ. ಕೂಡಲೇ ಮತ್ತೊಂದು ಸಭೆ ಆಯೋಜಿಸಬೇಕು ಎಂದರು.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ವಿರೋಧ ಪಕ್ಷದಲ್ಲಿದ್ದಾಗ ಪಾದಯಾತ್ರೆ ನಡೆಸಿ ಮೇಕೆ ದಾಟು ಜಲಾಶಯ ನಿರ್ಮಾಣಕ್ಕೆ ಒತ್ತಾಯಿಸಿದ್ದರು. ಇದೀಗ ಅವರೇ ಮುಖ್ಯಮಂತ್ರಿ ಆಗಿದ್ದಾರೆ. ಕೂಡಲೇ ಮೇಕೆದಾಟು ನಿರ್ಮಿಸಬೇಕು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದರು.

ಚಳುವಳಿ ನಂತರ ಕಬಿನಿ ಜಲಾಶಯಕ್ಕೆ ಭೇಟಿ ಕೊಟ್ಟು ನೀರಾವರಿ ಅಧಿಕಾರಿಗಳ ಕಾರ್ಯಪಾಲಕ ಅಭಿಯಂತರ ರಂಗಯ್ಯ ಅವರ ಜೊತೆ ಚರ್ಚಿಸಿ ಜಲಾಶಯ ತುಂಬಿರುವುದರಿಂದ ಕೂಡಲೇ ನಾಲೆಗಳಿಗೆ ನೀರು ಬಿಡಬೇಕೆಂದು ಒತ್ತಾಯಿಸಿದರು.

ಸ್ಥಳದಲ್ಲಿಯೇ ನೀರಾವರಿ ಸಚಿವ ರಾಮಲಿಂಗಾರೆಡ್ಡಿ ಜೊತೆ ದೂರವಾಣಿ ಮೂಲಕ ಮಾತುಕತೆ ನಡೆಸಿದ ಪರಿಣಾಮ ಸಚಿವರು ಮೊದಲು ನಾಲೆಗಳಿಗೆ ನೀರು ಹರಿಸುವಂತೆ ಸೂಚಿಸಿದ ನಂತರ, ರೈತ ಮುಖಂಡರು ಜಲಾಶಯದ ಮೇಲ್ಭಾಗದಲ್ಲಿ ನೀರಿನ ವೀಕ್ಷಣೆ ಮಾಡಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕಬಿನಿ ರೈತಹಿತರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಗೌರಿಶಂಕರ್, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ರಾಜೇಶ್, ಕೋಟೆ ಸುನೀಲ್, ಕೆಂಡಗಣ್ಣಸ್ವಾಮಿ, ಸುರೇಶ್ ಶೆಟ್ಟಿ, ನರಸೀಪುರ ತಾಲೂಕು ಅಧ್ಯಕ್ಷ ಕೆ. ಜಿ.ಗುರುಸ್ವಾಮಿ, ಕೆಂಡಗಣಪ್ಪ, ಉಮೇಶ್, ಅಂಬಳೆ ಮಂಜುನಾಥ್, ಸಿದ್ಧರಾಮ, ಬಸವರಾಜು, ರಾಮಮೂರ್ತಿ, ಗಂಗಾಧರ್, ರಂಗಸ್ವಾಮಿ, ಸಿದ್ದರಾಜು, ಮುರುಳಿ, ಅಜಿತ್, ಕುಮಾರ್, ಸ್ವಾಮಿ, ಸಿದ್ದನಾಯಕ, ಬಿಜು, ಮಹದೇವಪ್ಪ, ದಾಸಪ್ಪ, ನಾಗರಾಜು, ಕೃಷ್ಣ, ಜಯರಾಮ ಸೇರಿದಂತೆ 100 ಕ್ಕೂ ಹೆಚ್ಚು ರೈತರು ಇದ್ದರು.

# ಕೃಷ್ಣಮೂರ್ತಿ ನಿಧನ

ಮೈಸೂರು: ಮೈಸೂರಿನ ಹಿರಿಯ ನಾಗರಿಕರಾದ ಕೃಷ್ಣಮೂರ್ತಿ. ಟಿ.ಆರ್. (91) ಶುಕ್ರವಾರ ಮಧ್ಯಾಹ್ನ ರೂಪಾನಗರದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.



ಇವರು ಮೂಲತಃ ಚಿಕ್ಕಮಗಳೂರಿನ ಕೊಪ್ಪ ಗ್ರಾಮದವರಾಗಿದ್ದು ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಜೀವನ ಸಾಗಿಸುತ್ತಿದ್ದರು. ಮೃತರು ಪುತ್ರಿಯರಾದ ಟಿ.ಕೆ. ಹೇಮಲತಾ, ರೇವತಿ, ಲಕ್ಷ್ಮಿ, ಪದ್ಮಿನಿ ಹಾಗೂ ಅಳಿಯಂದೀರಾದ ಕೆ.ಬಿ. ರಾಜೇಶ್, ಅಮರನಾಥ್, ಶ್ರೀನಾಥ್ ಸೇರಿದಂತೆ ಮೊಮ್ಮಕಳು ಬಂಧುಮಿತ್ರರನ್ನು ಅಗಲಿದ್ದಾರೆ. ಶನಿವಾರ ಮೈಸೂರು ನಗರದಲ್ಲಿ ಅಂತ್ಯ ಕ್ರಿಯೆ ನೆರವೇರಿತು.

# ನನ್ನವ್ವ ತಂಡದ 13ನೇ ವಾರ್ಷಿಕೋತ್ಸವ

ಮೈಸೂರು: ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಾಚೇನಹಳ್ಳಿಯ ನನ್ನವ್ವ ಸಾಂಸ್ಕೃತಿಕ ಕಲಾತಂಡದ 13ನೇ ವಾರ್ಷಿಕೋತ್ಸವ ಅಂಗವಾಗಿ ನಗರದಲ್ಲಿ ಶನಿವಾರ ವರ್ಣರಂಜಿತವಾದ ಕನ್ನಡ, ಸಂಸ್ಕೃತಿ ಉತ್ಸವ ಏರ್ಪಡಿಸಲಾಗಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಈ ಉತ್ಸವದಲ್ಲಿ ಕಳಲೆ ಹೇಮಂತ್ ಕುಮಾರ್ ಮತ್ತು ತಂಡದವರು ಕಂಸಾಳೆ, ನಂಜನಗೂಡು ಪ್ರತಾಪ್ ಮತ್ತು ತಂಡದವರು ಕಹಳೆ, ಕಲ್ಲನಕುಪ್ಪೆ ಕೆ.ಬಿ. ಮಹದೇವಸ್ವಾಮಿ ಮತ್ತು ತಂಡದವರು ವೀರಗಾಸೆ, ಬೆನಕನಹಳ್ಳಿ ರಾಜಪ್ಪ ಮತ್ತು ತಂಡದವರು ಮಂಗಳವಾದ್ಯ ನಗರದ ನಾದಸಿರಿ ಸಂಸ್ಥೆಯ ಎಂ.ಪಿ. ಗೀತಾ, ಛಾಯಾ, ಕಮಲಾ, ರುಕ್ಮಿಣಿ, ಮಮತಾ, ಇಂದ್ರಾಣಿ, ಪ್ರೇಮಾ, ಶೋಭಾ ಮಂಡ್ಯ ಅವರು ಜಾನಪದ ನೃತ್ಯ ಪ್ರಸ್ತುತಪಡಿಸಿದರು. ಅವ್ವ ಜನಪದ ವೇದಿಕೆ ಮತ್ತು ತಂಡದ ಪ್ರೇಕ್ಷಾ, ಲೇಖನಾ, ಚಾರ್ವಿಕಾ, ಪ್ರತೀಕ್ಷಾ, ಪ್ರಕೃತಿ, ಲಿಪಿಕಾಬಾಯಿ, ದನ್ಯಾ ಅವರು ನಾಡು– ನುಡಿಯ ನೃತ್ಯ ಪ್ರದರ್ಶಿಸಿದರು. ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆಯ ಕನ್ನಡ ಮಾಧ್ಯಮ ವಿದ್ಯಾರ್ಥಿನಿಯರು ಸುಲೋಚನಾ, ಅರ್ಪಿತಾ, ತನ್ವಿ, ತ್ರಿಷಿಕಾ ನೇತೃತ್ವದಲ್ಲಿ ನಾಡಗೀತೆ ಹಾಡಿದರು.




ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಅಭಿನಂದನಾ ಸಮಿತಿಯ ಗೌರವಾಧ್ಯಕ್ಷ ಪ್ರಭಾಶಾಸ್ತ್ರಿ ಜೋಶ್ಯುಲ ಅವರ 'ಕಮಲ ಅರಳಿತು' ಕೃತಿಯನ್ನು ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ ಬಿಡುಗಡೆ ಮಾಡಿದರು. ಶರಣ ಸಾಹಿತ್ಯಪರಿಷತ್ತು ನಗರ ಘಟಕದ ಅಧ್ಯಕ್ಷರೂ ಆದ ಕವಿ ಜಯಪ್ಪ ಹೊನ್ನಾಳಿ ಕೃತಿ ಕುರಿತು ಮಾತನಾಡಿದರು. ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್. ಶಂಕರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಮ.ನ. ಲತಾ ಮೋಹನ್ ಮುಖ್ಯ ಅತಿಥಿಗಳಾಗಿದ್ದರು. ಸಮಿತಿಯ ಅಧ್ಯಕ್ಷ ನ. ಗಂಗಾಧರಪ್ಪ ಸ್ವಾಗತಿಸಿದರು. ಸಂಚಾಲಕಿ ಸುಮಾ ಪಂಚವಳ್ಳಿ ವಂದಿಸಿದರು.


**ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ**

ಮೈಸೂರು ಜಿಲ್ಲೆ, ಮೈಸೂರು. ದೂರವಾಣಿ: 08223–262242. ಇ–ಮೇಲ್: itstaff_ulb_kmagar@yahoo.co.in

ಸಂಖ್ಯೆ: ಪುಸಕ್ರ/ಜೆ.ಇಂ 01/ಟೆ.ಪ್ರ/ಸಿ.ಆರ್–10/2026–27 ದಿನಾಂಕ: 31.07.2026

**ಟೆಂಡರ್ ಪ್ರಕಟಣೆ** (ಕೆ.ಪಿ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಆರ್ ನಗರ ಪುರಸಭೆ ವ್ಯಾಪ್ತಿಯಲ್ಲಿ ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

1. ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 15.08.2026 ಸಂಜೆ 5:30 ಗಂಟೆವರೆಗೆ**
2. ಟೆಂಡರ್ ತೆರೆಯುವ **ದಿನಾಂಕ: 17.08.2026ರಂದು** ಕಛೇರಿಯ ಅವಧಿಯಲ್ಲಿ ಅಥವಾ ಮುಂದೆ ಸೂಚಿಸುವ/ ನಿಗಧಿಪಡಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ. ಸಂ. | ವಿವರ | ಮೀಸಲಾತಿಯ ವಿವರ | ಯೋಜನೆಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | DMA/2026-27/WS/WORK_INDENT60723 | ಸಾಮಾನ್ಯ | ಪುರಸಭಾ ನಿಧಿ | 4.67 | 11,675/- |
| 2 | DMA/2026-27/WS/WORK_INDENT61347 | ಸಾಮಾನ್ಯ | ಪುರಸಭಾ ನಿಧಿ | 4.89 | 12,225/- |
| 3 | DMA/2026-27/EL/WORK_INDENT 54685/CALL-2 | ಸಾಮಾನ್ಯ | ಪುರಸಭಾ ನಿಧಿ | 33.32 | 66,610/- |
| 4 | DMA/2026-27/SE8221 | ಸಾಮಾನ್ಯ | ಪುರಸಭಾ ನಿಧಿ | 5.67 | 14,200/- |

**ಸೂಚನೆ:** ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಕೆ.ಪಿ.ಪಿ.ಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು **https://kppp, karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
ಆಡಳಿತಾಧಿಕಾರಿ
ಪುರಸಭೆ, ಕೆ.ಆರ್.ನಗರ

DIPR/MYS/532/SA/2026-27

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಕೆ.ಆರ್.ನಗರ

# ಶ್ರೀರಾಮ ದೇವರ ಗುಡ್ಡ ಸಮೀಪ ಗಂಡು ಚಿರತೆ ಸಾವು

### ಮುಳ್ಳುಹಂದಿಯೊಂದಿಗೆ ಕಾದಾಟದ ಶಂಕೆ

ಗುಂಡ್ಲುಪೇಟೆ:– ಪಟ್ಟಣದ ಹೊರವಲಯದ ಶ್ರೀರಾಮಗುಡ್ಡ ಸಮೀಪದ ರಾಘವೇಂದ್ರ ಮಠದ ಬಳಿ ಸುಮಾರು ಮೂರು ವರ್ಷದ ಗಂಡು ಚಿರತೆಯೊಂದು ಮೃತಪಟ್ಟಿರುವ ಘಟನೆ ಶನಿವಾರ ಬೆಳಕಿಗೆ ಬಂದಿದೆ.




ರಾಘವೇಂದ್ರ ಮಠದ ಸಿಬ್ಬಂದಿ ಚಿರತೆಯ ಮೃತದೇಹವನ್ನು ಗಮನಿಸಿ ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಮಾಹಿತಿ ಪಡೆದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಾಥಮಿಕ ಪರಿಶೀಲನೆಯಲ್ಲಿ ಮುಳ್ಳುಹಂದಿಯೊಂದಿಗೆ ನಡೆದ ಕಾದಾಟದಲ್ಲಿ ಚಿರತೆ ಮೃತಪಟ್ಟಿರಬಹುದೆಂಬ ಅನುಮಾನ ವ್ಯಕ್ತವಾಗಿದೆ. ಆದರೆ ಚಿರತೆಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕವೇ ಸಾವಿಗೆ ನಿಖರ ಕಾರಣ ತಿಳಿಯಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಎಸಿಎಫ್ ಸುರೇಶ್ ಕುಮಾರ್, ವಲಯ ಅರಣ್ಯಾಧಿಕಾರಿ ಶಿವಕುಮಾರ್ ಹಾಗೂ ಎನ್‌ಜಿಒ ರಘುರಾಮ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಅರಣ್ಯ ಇಲಾಖೆ ಸಿಬ್ಬಂದಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

# "ಭಾರತ ಜೋಡೋ ಯುವ ಸಂಘ"ಗಳ ನೋಂದಣಿಗೆ ಆಹ್ವಾನ:

### ಅರ್ಹ ಸಂಘಗಳಿಗೆ ವರ್ಷಕ್ಕೆ ?10 ಲಕ್ಷ ಧನಸಹಾಯ

ಗುಂಡ್ಲುಪೇಟೆ, :– ಯುವಜನರಲ್ಲಿ ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಬೆಳವಣಿಗೆ, ವೈಜ್ಞಾನಿಕ ಮನೋಭಾವ ಹಾಗೂ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದಿರುವ "ಭಾರತ ಜೋಡೋ ಯುವ ಸಂಘ" ಯೋಜನೆಯಡಿ ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯ ಯುವ ಸಂಘಗಳ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದೆ.



ಈ ಕುರಿತು ಪುರಸಭೆ ಮುಖ್ಯಾಧಿಕಾರಿ ಎಸ್. ಸರವಣ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದು, ಪುರಸಭೆ ವ್ಯಾಪ್ತಿಯಲ್ಲಿರುವ ಎಲ್ಲಾ ಅರ್ಹ ಯುವಕ–ಯುವತಿಯರ ಸಂಘಟನೆಗಳು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದ್ದಾರೆ. ಯೋಜನೆಯಡಿ ನೋಂದಣಿಯಾಗುವ ಪ್ರತಿ ಅರ್ಹ ಯುವ ಸಂಘಕ್ಕೆ ವಾರ್ಷಿಕ ?10 ಲಕ್ಷ ಧನಸಹಾಯ ನೀಡಲಾಗುತ್ತದೆ. ಈ ನೆರವನ್ನು ಯುವಜನರ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಮಾಜಿಕ ಸೇವೆ, ಕೌಶಲ್ಯಾಭಿವೃದ್ಧಿ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದಾಗಿದೆ.

ನೋಂದಣಿಗೆ ಪ್ರತಿ ಸಂಘದಲ್ಲಿ 16 ರಿಂದ 35 ವರ್ಷದೊಳಗಿನ ಕನಿಷ್ಠ 100 ಸದಸ್ಯರು ಇರಬೇಕು. ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿರುವ ಸಂಘಗಳಿಗೆ ಮಾತ್ರ ಪುರಸಭೆ ಕಚೇರಿಯಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಂಘದ ಸದಸ್ಯರ ಆಧಾರ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿ ಕಡ್ಡಾಯ ದಾಖಲೆಗಳಾಗಿದ್ದು, ಅಗತ್ಯ ದಾಖಲೆಗಳೊಂದಿಗೆ ಪುರಸಭೆ ಕಚೇರಿಗೆ ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳುವಂತೆ ಮುಖ್ಯಾಧಿಕಾರಿ ಎಸ್. ಸರವಣ ಮನವಿ ಮಾಡಿದ್ದಾರೆ.

ಯುವಜನರ ಸರ್ವಾಂಗೀಣ ಅಭಿವೃದ್ಧಿ ಹಾಗೂ ಸಮಾಜಮುಖಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಹೆಚ್ಚಿನ ಸಂಖ್ಯೆಯ ಯುವ ಸಂಘಗಳು ಭಾಗವಹಿಸಿ ಸರ್ಕಾರದ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸ್ತೆ ತಡೆ ನಡೆಸಿ ರೈತ ಸಮಿತಿ ಆಕ್ರೋಶ

## ಸಿಡಬ್ಲ್ಯೂಆರ್‌ಸಿ ಆದೇಶ ಖಂಡಿಸಿ ಖಾಲಿ ಕೊಡ ಪ್ರದರ್ಶನ



ಚಾಮರಾಜನಗರ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ನೀಡಿರುವ ಆದೇಶವನ್ನು ವಿರೋಧಿಸಿ, ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿಯ ವತಿಯಿಂದ 'ಖಾಲಿ ಕೊಡ' ಪ್ರದರ್ಶಿಸಿ ಭಾರಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಿತಿಯ ರಾಜ್ಯಾಧ್ಯಕ್ಷ ಕಲ್ಲಂಬಳ್ಳಿ ಸೋಮನಾಯಕ ಹಾಗೂ ಜಿಲ್ಲಾಧ್ಯಕ್ಷ ಆಲೂರು ಮಲ್ಲು ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಖಾಲಿ ಕೊಡಗಳನ್ನು ಹಿಡಿದು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿದರು. ಈ ವೇಳೆ ತಮಿಳುನಾಡು ಸರ್ಕಾರ ಹಾಗೂ ಕಾವೇರಿ ನೀರು ನಿಯಂತ್ರಣ ಸಮಿತಿಯ ವಿರುದ್ಧ ಉಗ್ರ ಘೋಷಣೆಗಳನ್ನು ಕೂಗಿ ತಮ್ಮ ತೀವ್ರ ಆಕ್ರೋಶವನ್ನು ಹೊರಹಾಕಿದರು.

ಈ ಬೃಹತ್ ಪ್ರತಿಭಟನೆಯಲ್ಲಿ ಜಿ.ಎಂ.ಶಂಕರ್, ವಡ್ಡಗೆರೆ ಕೃಷ್ಣ, ಕಾಳನಹುಂಡಿ ಮಲ್ಲಿಕ್, ಬಡಗಲ ಪುರ ಕೆಂಪ, ಪಣ್ಯದಹುಂಡಿ ರಾಜಣ್ಣ, ಹರದನಹಳ್ಳಿ ರಾಮಚಂದ್ರ ನಾಯಕ, ಹೆಗ್ಗೋಠಾರ ರಾಜಶೇಖರ, ರಾಜಣ್ಣ ದೇಶಿಗೌಡನಪುರ, ಮಹೇಶ್, ನಮ್ಮನೆ ಪ್ರಶಾಂತ್, ಡಿ.ಎನ್. ಉಷಾ, ಆಟೋ ಮಂಜು, ಭಾಗ್ಯ, ಮಣಿಕಂಠ ಸೇರಿದಂತೆ ಹಲವು ರೈತ ನಾಯಕರು, ಪ್ರಮುಖರು ಭಾಗವಹಿಸಿದ್ದರು.

### ಕದ್ದುಮುಚ್ಚಿ ನೀರು: ವಿರೋಧ

**ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧ್ಯಕ್ಷ ಆಲೂರುಮಲ್ಲು, ರಾಜ್ಯ ಸರ್ಕಾರವು ಕಳೆದ ನಾಲ್ಕೈದು ದಿನಗಳಿಂದ ರಾತ್ರೋರಾತ್ರಿ ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ಸಮ್ಮತಿಸಿದರು. ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದ್ದು ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ, ಇಂತಹ ಸಂಕಷ್ಟದ ವಾತಾವರಣದಲ್ಲಿ ಮುಖ್ಯಮಂತ್ರಿಗಳು ತಮಿಳು ನಾಡಿಗೆ ನೀರು ಬಿಡುತ್ತಿರುವುದು ಸರಿಯಲ್ಲ. ಸರ್ಕಾರ ಹೀಗೆಯೇ ನೀರು ಹರಿಸುವುದನ್ನು ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಬೃಹತ್ ಮಟ್ಟದ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.**

### ಒಂದು ಹನಿ ನೀರನ್ನೂ ಹರಿಸದಂತೆ ಆಗ್ರಹ

**ಸಮಿತಿಯ ರಾಜ್ಯಾಧ್ಯಕ್ಷ ಕಲ್ಲಂಬಳ್ಳಿ ಸೋಮನಾಯಕ ಮಾತನಾಡಿ, ರಾಜ್ಯದಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಲ್ಲದೆ ಪರಿತಪಿಸುವ ವಾತಾವರಣ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ತಮಿಳು ನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 3,500 ಕ್ಯೂಸೆಕ್ ??ರು ಹರಿಸುವಂತೆ ಕಾವೇರಿ ನೀರು ನಿಯಂ ತ್ರಣ ಸಮಿತಿ ನೀಡಿರುವ ನಿರ್ದೇಶನವು ಅತ್ಯಂತ ಅನ್ಯಾ ಯದಿಂದ ಕೂಡಿದೆ. ಕನ್ನಡಿಗರಿಗೆ ಕುಡಿಯಲು ನೀರಿಲ್ಲದಿರುವಾಗ ತಮಿಳುನಾಡಿನಲ್ಲಿ ಬೆಳೆ ಬೆಳೆಯಲು ನೀರು ಹರಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು, ರಾಜ್ಯ ಸರ್ಕಾರ ಈ ಆದೇಶವನ್ನು ಒಪ್ಪಿಕೊಳ್ಳಬಾರದು ಮತ್ತು ತಮಿಳುನಾಡಿಗೆ ಒಂದು ಹನಿ ನೀರನ್ನೂ ಬಿಡಬಾರದು ಎಂದು ಒತ್ತಾಯಿಸಿದರು.**

# ಸಿಡಬ್ಲ್ಯೂಆರ್‌ಸಿ ಆದೇಶ ಖಂಡಿಸಿ ಪ್ರತಿಭಟನೆ

### ತಮಿಳುನಾಡಿಗೆ ಕಾವೇರಿ ನೀರು ಬಿಟ್ಟರೆ ನಮ್ಮ ಕರ್ನಾಟಕ ಸೇನೆಯಿಂದ ಉಗ್ರ ಹೋರಾಟ

ಚಾಮರಾಜನಗರ, ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಆದೇಶಿಸಿರುವ ಕ್ರಮವನ್ನು ಖಂಡಿಸಿ ನಮ್ಮ ಕರ್ನಾಟಕ ಸೇನೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಎದುರು

ಸೇನೆಯ ಜಿಲ್ಲಾಧ್ಯಕ್ಷ ಸುರೇಶ್ ನಾಯಕ ಹಾಗೂ ತಾಲೂಕು ಅಧ್ಯಕ್ಷ ಜಿ.ಗಿರೀಶ್ ನಾಯಕ್ ಅವರ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು

ಪ್ರತಿಭಟನೆ ನಡೆಸಿದರು.ಕಾವೇರಿ ನೀರು ನಿಯಂತ್ರಣ ಸಮಿತಿ ವಿರುದ್ಧ, ತಮಿಳುನಾಡು ಸರ್ಕಾರ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾಧ್ಯಕ್ಷ ಸುರೇಶ್ ನಾಯಕ, ತಾಲೂಕು ಅಧ್ಯಕ್ಷ ಜಿ.ಗಿರೀಶ್ ನಾಯಕ ಮಾತನಾಡಿ, ತಮಿಳುನಾಡಿಗೆ ನಿತ್ಯ 3500 ಕ್ಯೂಸೆಕ್ಸ್ ಕಾವೇರಿ ನೀರನ್ನು ಬಿಡುಗಡೆ ಮಾಡುವಂತೆ ಸಿ.ಡಬ್ಲ್ಯೂ. ಆರ್.ಸಿ. ಹೊರಡಿಸಿರುವುದು ಅತ್ಯಂತ ಖಂಡನೀಯ ಕೂಡಲೇ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ರಾಜ್ಯದಲ್ಲಿ ಮಳೆ ಕೊರತೆಯಿಂದ ಅಂತರ್ಜಲ ಕುಸಿದು ಜನ,ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ತಲೆದೋರಿದ್ದು ರಾಜ್ಯ ಜನತೆ ತುಂಬಾ ಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿ ಸರ್ವಾಧಿಕಾರ ಧೋರಣೆ ನಡೆಸುತ್ತಿದೆ. ಇವರಿಗೆ ಕರ್ನಾಟಕ ಜನರ ಹಿತದೃಷ್ಟಿ.ಸಾರ್ವಜನಿಕ ಹಿತದೃಷ್ಟಿ ಬೇಕಿಲ್ಲ. ನಿಮ್ಮ ಆದೇಶ ಜನವಿರೋಧಿ ಆದೇಶವಾಗಿದೆ. ಈ ಕೂಡಲೇ ಈ ಆದೇಶ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ನಮ್ಮ ಕರ್ನಾಟಕ ಸೇನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಸ್ಮಾನ್, ಉಪಾಧ್ಯಕ್ಷ ನಾಗರಾಜು, ತಾಲೂಕು ಅಧ್ಯಕ್ಷ ಗಿರೀಶ್ ನಾಯಕ್, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಶ್ರೀನಿವಾಸನಾಯಕ, ಉಪಾಧ್ಯಕ್ಷ ಕೃಷ್ಣೇಗೌಡ, ಗೌರವಾಧ್ಯಕ್ಷ ರಮೇಶ್ ಗೌಡ, ಟೌನ್ ಅಧ್ಯಕ್ಷ ಮುದಾಸೀರ್, ಉಪಾಧ್ಯಕ್ಷ ಚೇತನ್, ಸಂಘಟನಾ ಕಾರ್ಯದರ್ಶಿ ಸಚಿನ್, ಸಹ ಕಾರ್ಯದರ್ಶಿ ರಾಜೇಂದ್ರ, ಅಂಕಶೆಟ್ಟಿ, ನಾಗೇಶ್ ಬಚ್ಚನ್ ಇತರರು ಭಾಗವಹಿಸಿದ್ದರು.



# ಸಿಡಬ್ಲ್ಯೂಆರ್‌ಸಿ ಆದೇಶ ಖಂಡಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಪ್ರತಿಭಟನೆ



ಚಾಮರಾಜನಗರ, ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ಖಂಡಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ, ತಮಿಳುನಾಡು ಸರ್ಕಾರ, ಕಾವೇರಿ ನೀರು ವಿಯಂತ್ರಣ ಸಮಿತಿ, ತಮಿಳುನಾಡು ಮುಖ್ಯಮಂತ್ರಿ ವಿಜಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ವೇದಿಕೆ ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ ಮಾತನಾಡಿ, ಕಾವೇರಿ ನೀರು ನಿಯಂತ್ರಣ ಸಮಿತಿಯು ಕಾವೇರಿಯಿಂದ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿನಿತ್ಯ 3.500 ಕ್ಯೂಸೆಕ್ ನೀರನ್ನು ಹರಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಿರುವುದು ಖಂಡನೀಯ. ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತಮಿಳುನಾಡಿನಲ್ಲಿ ಬೆಳೆ ಬೆಳೆಯುವುದಕ್ಕೆ ನೀರು ಹರಿಸುವುದು ಎಷ್ಟು ಸರಿ ? ರಾಜ್ಯ ಸರ್ಕಾರ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶವನ್ನು ಒಪ್ಪಿಕೊಳ್ಳಬಾದರು, ಒಂದು ಹನಿ ನೀರನ್ನು ತಮಿಳುನಾಡಿಗೆ ಹರಿಸಬಾರದು ಎಂದು ಒತ್ತಾಯಿಸಿದರು.

ಕರ್ನಾಟಕ ಬಂದ್ ಸಂಪೂರ್ಣ ಬೆಂಬಲ್ಲ: ಜಿಲ್ಲಾ ಗೌರವಾಧ್ಯಕ್ಷ ಪಿ.ಲಿಂಗರಾಜು ಮಾತನಾಡಿ, ರಾಜ್ಯ ಸರ್ಕಾರ ಕಳೆದ ನಾಲ್ಕೈದು ದಿನಗಳಿಂದ ಕದ್ದು ಮುಚ್ಚಿ, ರಾತ್ರೋರಾತ್ರಿಗೆ ತಮಿಳುನಾಡಿಗೆ ನೀರು ಹರಿಸುತ್ತಿರುವುದು ಅತ್ಯಂತ ಖಂಡನೀಯವಾದದ್ದು, ರಾಜ್ಯದಲ್ಲಿ ಬರಗಾಲ ಆವರಿಸಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ರಾಜ್ಯದ ಜನತೆ ಸಂಕಷ್ಟದಲ್ಲಿ ಸಿಲುಕಿದ್ದಾರೆ ಇದು. ರಾಜ್ಯದ ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲವೇ ಎಂದು ಖಾರವಾಗಿ ಪ್ರಶ್ನಿಸಿದರು. ಇದನ್ನು ಖಂಡಿಸಿ ಕನ್ನಡ ಚಳವಳಿ ಕರೆ ನೀಡಿರುವ ಕರ್ನಾಟಕ ಬಂದ್ ಸಂಪೂರ್ಣ ಬೆಂಬಲವನ್ನು ನಮ್ಮ ಸಂಘಟನೆ ನೀಡಲಿದೆ. ಮುಖ್ಯಮಂತ್ರಿಗಳು ತಮಿಳುನಾಡಿಗೆ ನೀರು ಬಿಟ್ಟರೆ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ಶಬಾಜ್ ಷರೀಫ್, ಗೌರವ ಸಲಹೆಗಾರ ಸೈಯದ್ ಮುಜಾಮಿಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಮೋಹನ್‌ಕುಮಾರ್. ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶಾಲಿಕ್, ಶಿವಮೂರ್ತಿ, ಸೋಯಿಬ್, ಪ್ರಧಾನ ಕಾರ್ಯದರ್ಶಿ ಶಿವಮ್ಮ, ತಾಲೂಕು ಅಧ್ಯಕ್ಷ ಮಹದೇವ ಪ್ರಸಾದ್, ಪ್ರಧಾನಕಾರ್ಯದರ್ಶಿ ಸೋಮು, ಸಹ ಕಾರ್ಯದರ್ಶಿ ಅಜಯ್, ಮೊಹಮ್ಮದ್, ಸೈಯದ್ ರಿಯಾಜ್ ಅಹಮದ್, ನಾಸೀರ್‌ಉಲ್ಲಾ, ಅಬ್ದುಲ್ ಸುಭಾನ್, ಚಿಕ್ಕಅಂಕಶೆಟ್ಟಿ ಇತರರು ಭಾಗವಹಿಸಿದ್ದರು.


**ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401**
(Autonomous Medical Institution, Government of Karnataka)
(Fax & Phone: 08232-231001, 222086, E-mail : mimsmandya@gmail.com)
Website : www.mimsmandya.org

**ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ**
**(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)**

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಅರಿವಳಿಕೆ ವಿಭಾಗಕ್ಕೆ ಅವಶ್ಯವಿರುವ Medical Oxygen & Nitrous Cylinder ಗಳಿಗೆ Refill ಮಾಡಲು ನೊಂದಾಯಿಸಲ್ಪಟ್ಟ ಅರ್ಹ ಉತ್ಪಾದಕರು ಮತ್ತು Distributors ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ. ಸಂ | ಟೆಂಡರ್ ಪ್ರಕಟಣೆ ಸಂಖ್ಯೆ | ಟೆಂಡರ್ ವಿವರ | ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ ರೂ. |
|---|---|---|---|---|
| 1 | ಸಂಖ್ಯೆ.ಮಿಮ್ಸ್/ಸರಬ/ಮೆಡಿಕಲ್ ರಿಫೀಲಿಂಗ್/ಅರವಳಿಕೆ/ಅಲ್ಪಾವಧಿ ಮರು ಇ–/9/2025–26 | ಅರಿವಳಿಕೆ ವಿಭಾಗಕ್ಕೆ Medical Oxygen & Nitrous Cylinder ಗಳಿಗೆ Refill ಮಾಡುವ ಬಗ್ಗೆ. ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. | ರೂ.15.00 ಲಕ್ಷಗಳು (ರೂ. ಹದಿನೈದು ಲಕ್ಷಗಳು ಮಾತ್ರ) | 2.5% |

ಟೆಂಡರ್‌ನ್ನು ಇ–ಪೋರ್ಟಲ್ ಮುಖಾಂತರ ನಿಗದಿತ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) ದೊಂದಿಗೆ ಸಲ್ಲಿಸುವುದು ಇತರೆ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ http.//kppp.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ(ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದಾಗಿದೆ.

ಸಹಿ/–ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/338/2026–27


# ಸಂವಿಧಾನದದಿಂದ ಭಾರತದೇಶ ಅಭಿವೃದ್ಧಿ ಪಥದತ್ತ



ಚಾಮರಾಜನಗರ,ಡಾ. ಬಿ ಆರ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಪ್ರಭಾವದಿಂದ ಭಾರತದೇಶ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ನಿವೃತ್ತ ಡಿಡಿಪಿಯು ಮಂಜುನಾಥ ಪ್ರಸನ್ನ ತಿಳಿಸಿದರು.

ತಾಲ್ಲೂಕಿನ ಅಮಚವಾಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ಜಿಲ್ಲಾ ಜನಹಿತಾಶಕ್ತಿ ಹೋರಾಟ ವೇದಿಕೆಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಜ್ಞಾನಿಯಾದ ಅಂಬೇಡ್ಕರ್ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಪದವಿಗಳನ್ನು ಪಡೆದು ಅಧ್ಯಯನಶೀಲರಾಗಿ ಹಾಗೂ ಪ್ರಪಂಚದ ಎಲ್ಲಾ ದೇಶಗಳ ಸಂವಿಧಾನದ ಅಂಶಗಳನ್ನು ಅಧ್ಯಯನ ಮಾಡಿ ಭಾರತಕ್ಕೆ ಸರಿಹೊಂದುವ ಉತ್ತಮ ಸಂವಿಧಾನವನ್ನು ರಚಿಸಿ ಸರ್ವರು ಸಮಭಾವದಿಂದ ಅಭಿವೃದ್ಧಿಯ ಕಡೆಗೆ ಸಾಗಲು ಅವಕಾಶ ನೀಡಿದ್ದಾರೆ ಎಂದರು.

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಸಮಾಜಸೇವಕ ಹೊನ್ನಹಳ್ಳಿ ವೃಷಭೇಂದ್ರಪ್ಪ ಮಾತನಾಡಿ, ಭಾರತದ ಸಂವಿಧಾನ ವಿಶ್ವದಲ್ಲಿ ಶ್ರೇಷ್ಠವಾದದ್ದು. ಭಾರತದ ಭಾ? ಧರ್ಮ, ಸಂಸ್ಕೃತಿ, ಪರಂಪರೆ ವಿವಿಧತೆಯಲ್ಲಿ ಏಕತೆಯ ಭಾವವನ್ನು ಮೂಡಿಸಿ ರೂಪಿಸಿದ ಮಹಾ ಸಂವಿಧಾನ ಎಂದರು.

ಇತಿಹಾಸ ಉಪನ್ಯಾಸಕ ಸುರೇಶ್ ಎನ್ ಋಗ್ವೇದಿ ಮಾತನಾಡಿ ಭಾರತವನ್ನು ಬ್ರಿಟಿಷರು ಆಳ್ವಿಕೆ ನಡೆಸಿದ ಸಂದರ್ಭದಲ್ಲಿಯೇ 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ದಿಕ್ಕಿನಲ್ಲಿ ಹಲವಾರು ಕಾನೂನುಗಳನ್ನು ರೂಪಿಸುತ್ತಾ ಅಂತಿಮವಾಗಿ 1947ರಲ್ಲಿ ಸ್ವಾತಂತ್ರ್ಯ ಲಭಿಸಿತು. ಮೀಸಲಾತಿ, ಮಹಿಳಾ ಸಬಲೀಕರಣ, ಕಾರ್ಮಿಕರ ಏಳಿಗೆ,ದೇಶ ವಿದೇಶಗಳ ಸೌಹಾರ್ದತೆ, ಭಾರತದ ಸಮಗ್ರ ಭಾವೈಕ್ಯತೆ, ಸಂಸ್ಕೃತಿ ಪರಂಪರೆಗಳ ಸರ್ವ ದೃಷ್ಟಿಕೋನದ ಮೂಲಕ ರೂಪಿಸಿದ ಸಂವಿಧಾನ ಭಾರತದ ಪ್ರಗತಿಗೆ ಪೂರಕವಾದ ಸಂವಿಧಾನವಾಗಿದೆ ಎಂದರು.

ಜನ ಹಿತಾಸಕ್ತಿ ಹೋರಾಟ ವೇದಿಕೆ ಅಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ಅಂಬೇಡ್ಕರ್ ರಚಿಸಿರುವ ಸಂವಿಧಾನದ ಬಗ್ಗೆ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲಿ ಉಪನ್ಯಾಸಕರಾದ ಶಿವರಾಮ್, ಬಸವಣ್ಣ, ?ಲ ಜನ ಹಿತಾಸಕ್ತಿ ಹೋರಾಟ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಕಾಡಹಳ್ಳಿ ನಾಗರಾಜು, ವಿದ್ಯಾರ್ಥಿಗಳು ಹಾಜರಿದ್ದರು.

# ಮಗುವಿನ ಮೊದಲ ಲಸಿಕೆಯೇ ತಾಯಿ ಹಾಲು

**ಗುಂಡ್ಲುಪೇಟೆ:**ವಿಶ್ವ ಸ್ತನ್ಯಪಾನ ಸಪ್ತಾಹ2026ರ ಅಂಗವಾಗಿ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸ್ತನ್ಯಪಾನದ ಮಹತ್ವ ಕುರಿತು ಜಾಗೃತಿ ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ. ಅಲೀಂ ಪಾಷಾ ಬಿ.ಆರ್., ಗರ್ಭಧಾರಣೆಯ ಆರಂಭದಿಂದಲೇ ಗರ್ಭಿಣಿಯರ ನೋಂದಣಿ, ನಿಯಮಿತ ಗರ್ಭಪೂರ್ವ ತಪಾಸಣೆ (ಂಓಅ), ಸುರಕ್ಷಿತ ಹೆರಿಗೆ ಹಾಗೂ ಹೆರಿಗೆಯ ನಂತರ ತಾಯಿ–ಮಗುವಿನ ನಿರಂತರ ಆರೈಕೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಮಗುವಿಗೆ ಮೊದಲ ಆರು ತಿಂಗಳು ಕೇವಲ ತಾಯಿಯ ಹಾಲನ್ನೇ ನೀಡಬೇಕು. ನಂತರ ಪೂರಕ ಆಹಾರದೊಂದಿಗೆ ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯವರೆಗೆ ಸ್ತನ್ಯಪಾನ ಮುಂದುವರಿಸಬೇಕು ಎಂದು ಸಲಹೆ ನೀಡಿದರು.ಈ ವರ್ಷದ ವಿಶ್ವ ಸ್ತನ್ಯಪಾನ ಸಪ್ತಾಹದ ಧ್ಯೇಯವಾಕ್ಯ "ಸ್ತನ್ಯಪಾನಕ್ಕೆ ಆದ್ಯತೆ ನೀಡಿ: ಸುಸ್ಥಿರ ಬೆಂಬಲ ವ್ಯವಸ್ಥೆ ನಿರ್ಮಿಸಿ" ಕುರಿತು ವಿವರಿಸಿದ ಅವರು, ಸ್ತನ್ಯಪಾನವು ಕೇವಲ ತಾಯಿಯ ಜವಾಬ್ದಾರಿಯಲ್ಲ; ಕುಟುಂಬ, ಆರೋಗ್ಯ ಸಿಬ್ಬಂದಿ, ಉದ್ಯೋಗದಾತರು ಹಾಗೂ ಸಮಾಜದ ಸಹಕಾರವೂ ಅಗತ್ಯ ಎಂದು ಹೇಳಿದರು.



ಸ್ತ್ರೀರೋಗ ತಜ್ಞೆ ಡಾ. ಛಾಯಾ ಮಾತನಾಡಿ, ಗರ್ಭಿಣಿಯರು ಪೌಷ್ಟಿಕ ಆಹಾರ ಸೇವಿಸುವುದು ಹಾಗೂ ನಿಯಮಿತ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಗತ್ಯ ಎಂದರು. ಹೆರಿಗೆಯ ನಂತರ ಮಗುವಿಗೆ ನೀಡುವ ಮೊದಲ ಹಾಲಾದ ಕೊಲೊಸ್ಟ್ರಮ್ ಮಗುವಿಗೆ ಮೊದಲ ಲಸಿಕೆಯಂತೆ ಕಾರ್ಯನಿರ್ವಹಿಸಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಆಡಳಿತ ವೈದ್ಯಾಧಿಕಾರಿ ಡಾ. ಮಂಜುನಾಥ್, ಪ್ರಸೂತಿ ತಜ್ಞ ಡಾ. ಅರುಣ್ ಮಕ್ಕಳ ತಜ್ಞ ಡಾ. ವೇಣುಗೋಪಾಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗರ್ಭಿಣಿಯರು, ಬಾಣಂತಿಯರು, ಆರೋಗ್ಯ ಸಿಬ್ಬಂದಿ, ಸಂತ ಮಾರ್ಥಾ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರು, ಬೋಧಕ ವೃಂದ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸ್ತನ್ಯಪಾನದ ಮಹತ್ವ ಕುರಿತು ಮನಮುಟ್ಟುವ ಪಾತ್ರಾಭಿನಯ (ರೋಲ್ ಪ್ಲೇ) ಪ್ರದರ್ಶಿಸಿ ಜಾಗೃತಿ ಮೂಡಿಸಿದರು.

### ಚಿದಾನಂದ ಗಣೇಶ್ ಅವಿರೋಧ ಆಯ್ಕೆ

# ವರ್ತಕರ ಸಂಘದ ಅಧ್ಯಕ್ಷರ ಆಯ್ಕೆ

ಚಾಮರಾಜನಗರ,ಚಾಮರಾಜನಗರ ವರ್ತಕರ ಸಂಘದ ಅಧ್ಯಕ್ಷರಾಗಿ ಚಿದಾನಂದ ಗಣೇಶ ಅವಿರೋಧವಾಗಿ ಆಯ್ಕೆಯಾದರು.

ನಗರದ ವರ್ತಕರ ಭವನದಲ್ಲಿ ನಡೆದ ಸಂಘದ 2026–27ನೇ ಸಾಲಿನ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಚಿದಾನಂದ ಗಣೇಶ್, ಉಪಾಧ್ಯಕ್ಷರಾಗಿ ಎಂ. ಕಮಲರಾಜ್, ಕಾರ್ಯದರ್ಶಿಯಾಗಿ ಬ್ರಿಜೇಶ್ ಓಲಿವೇರ್, ಖಜಾಂಚಿಯಾಗಿ ಎಚ್.ಬಿ. ಶಿವಕುಮಾರಸ್ವಾಮಿ, ಅವಿರೋಧವಾಗಿ ಆಯ್ಕೆಯಾದರೆ, ಸಹ ಕಾರ್ಯದರ್ಶಿ ಸ್ಥಾನಕ್ಕೆ ಪೈಪೋಟಿ ಏರ್ಪಟ್ಟಿತ್ತು. ನಂತರ ನಡೆದ ಮತದಾನ ದಲ್ಲಿ ಎನ್. ಆರ್. ಮುರಳೀಧರ್ 12 ಮತಗಳನ್ನು ಪಡೆದು ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರೆ, ಸಿ.ಎನ್. ಮೋಹನ್‌ಕುಮಾರ್ 9 ಮತಗಳನ್ನು ಪಡೆದಕೊಂಡರು. ಚುನಾವಣಾಧಿಕಾರಿಯಾಗಿ ಸಿ.ವಿ. ಶ್ರೀನಿವಾಸ್, ಎಚ್.ಬಿ. ರಾಜಶೇಖರ್ ಕಾರ್ಯನಿರ್ವಹಿಸಿದರು. ಕಾನೂನು ಸಲಹೆಗಾರರಾದ ಸಿ.ಜಿ. ನಂದಕುಮಾರ್ ಉಪಸ್ಥಿಂತರಿದ್ದರು.




ಇದಕ್ಕು ಮುನ್ನಾ ಸಂಘದ ನಿರ್ದೇಶಕರಾಗಿ ಸಿ. ಎನ್.ನಾರಾಯಣ್, ಸಿ.ಜೆ.ಪದ್ಮಕುಮಾರ್, ಎ.ಶ್ರೀನಿವಾಸನ್, ಸಿ.ಎಸ್. ಮಹೇಶ್‌ಕುಮಾರ್, ಎಚ್. ಗಿರೀಶ್, ಸಿ.ಎನ್. ಮೋಹನ್‌ಕುಮಾರ್, ಸೈಯದ್ ಆಲ್ತಾಫ್, ಬಿ.ಚಂದ್ರಶೇಖರ್, ಜಿ.ಅಂಕಶೆಟ್ಟಿ, ಎನ್. ಸತೀಶ್, ಎಂ.ರಾಜಣ್ಣ, ಬಿ.ಶ್ರೀಧರ್, ವಿ. ಪ್ರದೀಪ್ ಕುಮಾರ್, ಜಯರಾಜು, ಎಲ್. ಸುರೇಶ್, ಸಿ.ಎನ್. ಚಂದ್ರಪ್ರಭಜೈನ್ ಅವಿರೋಧವಾಗಿ ಆಯ್ಕೆಯಾಗಿದ್ದರು. ಸಂಘದ ಅಭಿವೃದ್ಧಿಗೆ ಬದ್ಧ: ನೂತನ ಅಧ್ಯಕ್ಷ ಚಿದಾನಂದಗಣೇಶ್ ಮಾತನಾಡಿ, ಸಂಘದ ಎಲ್ಲಾ ನಿರ್ದೇಶಕರು ನಮ್ಮ ತಂಡವನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಆಭಾರಿಯಾಗಿದ್ದೇವೆ. ಮುಂದಿನ ದಿನಗಳಲ್ಲಿ ಸಂಘದ ಅಭಿವೃದ್ಧಿ ಹಾಗೂ ವರ್ತಕರ ಕಷ್ಟಗಳಿಗೆ ಸ್ಪಂದಿಸುವ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ವರ್ತಕರ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದಾಗಿ ತಿಳಿಸಿದರು.

ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳನ್ನು ವರ್ತಕರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಪದ್ಮಪ್ರಸಾದ್, ಮಾಜಿ ಅಧ್ಯಕ್ಷ ಎಸ್. ಬಾಲಸುಬ್ರಮಣ್ಯ, ಸಂಘದ ಮಾಜಿ ಅಧ್ಯಕ್ಷ ರವಿಶಂಕರ್, ಉದಯ ಕುಮಾರ್ ಮೊದಲಾದವರು ಸನ್ಮಾನಿನಿಸಿದರು.

# ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ ಸಮಗ್ರ ಕೃಷಿ ಆಸರೆ: ಜಿ ಪಂ ಸಿ.ಇ.ಒ. ಅಭಿಮತ

**ಮಂಡ್ಯ:** ಜಿ.ಪಂ. ಸಿ.ಇ.ಒ. ನಂದಿನಿ ಕೆ.ಆರ್. ರವರು ಮಂಡ್ಯ ತಾಲ್ಲೂಕಿನ ಕೊತ್ತತ್ತಿ ಹೋಬಳಿಯ ಚನ್ನಪ್ಪನದೊಡ್ಡಿ ಗ್ರಾಮದ ನೈಸರ್ಗಿಕ ಕೃಷಿಕರಾದ ಶ್ರೀ ಕೆಂಪೇಗೌಡ ಬಿನ್ ಬೋರಯ್ಯ ರವರ ಜಮೀನಿಗೆ ಭೇಟಿ ನೀಡಿ, ಅವರು ಅನುಸರಿಸುತ್ತಿರುವ ಕೃಷಿ ಪದ್ಧತಿಯ ಬಗ್ಗೆ ಪರಿಶೀಲಿಸಿದರು.



ಹವಾಮಾನ ಬದಲಾವಣೆ, ಅತಿವೃಷ್ಟಿ ಹಾಗೂ ಅನಾವೃಷ್ಟಿಯಂತಹ ಕಠಿಣ ಸನ್ನಿವೇಶಗಳಲ್ಲಿ ಬೆಳೆಗಳನ್ನು ರಕ್ಷಿಸಿಕೊಳ್ಳಲು, ನಷ್ಟವನ್ನು ತಡೆಯಲು ಮತ್ತು ನಿರಂತರ ಸುಸ್ಥಿರ ಆದಾಯ ಪಡೆಯಲು 'ಹವಾಮಾನ ಸ್ಥಿತಿಸ್ಥಾಪಕತ್ವ' (ಅಟುಟಚಿಣಜ ಖಿಛುಟುಜಟಿಛಿಜ) ಕೃಷಿ ಪದ್ಧತಿಗಳನ್ನು ರೈತರ ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು.

ಮಣ್ಣಿನ ಆರೋಗ್ಯ ಸುಧಾರಣೆ ಇಂದಿನ ಆದ್ಯತೆಯಾಗಬೇಕಿದೆ. ಜಿಲ್ಲೆಯಲ್ಲಿ ರೈತರು ಏಕಬೆಳೆ ಬೆಳೆಯುವುದರ ಬದಲಾಗಿ ಸಮಗ್ರ ಕೃಷಿ ಪದ್ಧತಿಗೆ, ನೈಸರ್ಗಿಕ ಕೃಷಿ ಅಥವಾ ಸಾವಯವ ಕೃಷಿ ಪದ್ಧತಿಗಳಿಗೆ ಹೆಚ್ಚಿನ ಮನ್ನಣೆ ನೀಡಿ, ಸುಸ್ಥಿರ ಆದಾಯಕ್ಕಾಗಿ ಕೃಷಿ ನಂತರ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಒಳಗೊಂಡಂತೆ ವಿವಿಧ ಆದಾಯೋತ್ಪನ್ನ ಚಟುವಟಿಕೆಗಳಿಗೆ ಚಿಂತನೆ ನಡೆಸುವುದು ಅನಿವಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಸ್ತುತ ಜಿಲ್ಲೆಯಲ್ಲಿ ಅನಾವೃಷ್ಠಿ ಪರಿಸ್ಥಿತಿಯಿದ್ದು, ಅಲ್ಪಾವಧಿ ಹಾಗೂ ಕಡಿಮೆ ನೀರಿನಿಂದ ನಿರೀಕ್ಷಿತ ಉತ್ಪಾದನೆ ಪಡೆಯಬಹುದಾದ ಪರ್ಯಾಯ ಬೆಳೆಗಳನ್ನು ಆಯ್ಕೆಮಾಡಿಕೊಳ್ಳಬೇಕಿದೆ. ಸಮರ್ಥ ನೀರಿನ ಬಳಕೆಗಾಗಿ ಹನಿ ಅಥವಾ ತುಂತುರು ನೀರಾವರಿ ಘಟಕ, ಸಂರಕ್ಷಣಾತ್ಮಕ ನೀರಾವರಿಗಾಗಿ ಕೃಷಿ ಹೊಂಡ ಬಳಕೆಯ ವಿಧಾನಗಳನ್ನು ಅನುಸರಿಸಬೇಕಿದೆ. ಒಂದೇ ಬೆಳೆ ಬದಲಾಗಿ ವಿವಿಧ ಬೆಳೆಗಳನ್ನು ಬೆಳೆದಾಗ ಹವಾಮಾನ ಬದಲಾವಣೆಗೆ ನಷ್ಟದ ಪ್ರಮಾಣ ಕಡಿಮೆಯಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಕೆಂಪೇಗೌಡರವರು ಕಳೆದ 10 ವರ್ಷದಿಂದ ನೈಸರ್ಗಿಕ ಕೃಷಿ ಹಾಗೂ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿ, ಆರ್ಥಿಕವಾಗಿ ಸುಸ್ಥಿರತೆ ಸಾಧಿಸಿ ಇತರೆ ರೈತರಿಗೆ ಮಾದರಿಯಾಗಿದ್ದಾರೆ. ಇವರು 2 ಳ ಎಕರೆ ಜಮೀನು ಹೊಂದಿದ್ದು ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಭತ್ತ, ಕಬ್ಬು, ಸೊಪ್ಪು, ತರಕಾರಿ ಹಾಗೂ ಹಲವಾರು ಹಣ್ಣು ಬೆಳೆಗಳನ್ನು ಬೆಳೆದು ತಮ್ಮದೆ ಮಳಿಗೆಯಲ್ಲಿ ಹಾಗೂ ಪ್ರತಿ ಬುಧವಾರ ಹಾಗೂ ಭಾನುವಾರ ಮಂಡ್ಯ ನಗರದ ತೋಟಗಾರಿಕೆ ಜಂಟಿ ನಿರ್ದೇಶಕರ ಕಚೇರಿ ಎದುರು ನಡೆಯುವ ಸಾವಯವ ಸಂತೆಯಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ, ನಿರಂತರ ಆದಾಯ ಗಳಿಸುತ್ತಿದ್ದಾರೆ ಇದು ಉಳಿದ ರೈತರಿಗೂ ಮಾದರಿಯಾಗಲಿ ಎಂದು ತಿಳಿಸಿದರು.

12 ಅಡಿ ಅಂತರದ ಪಟದಲ್ಲಿ ಕಬ್ಬು ಬೆಳೆ: ಕಳೆದ ಐದು ವರ್ಷಗಳಿಂದ 12 ಅಡಿ ಅಂತರದ ಪಟದಲ್ಲಿ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಕಬ್ಬು ಬೆಳೆದು, ಪ್ರತಿ ನಿತ್ಯ ಇವರು 40–50 ಕೆ.ಜಿ. ಕಬ್ಬು ಮಾತ್ರ ಕಟಾವು ಮಾಡಿ ಮಂಡ್ಯ ನಗರದಲ್ಲಿ ತಮ್ಮ ಖುಷಿ ಆರ್ಗ್ಯಾನಿಕ್ಸ್ ಮಳಿಗೆಯಲ್ಲಿ, ಕಬ್ಬಿನ ಜ್ಯೂಸ್ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಪ್ರತಿ ಟನ್ ಕಬ್ಬಿನಿಂದ 700 ಲೀಟರ್ ಜ್ಯೂಸ್ ಸಿದ್ದಪಡಿಸಿ ರೂ. 50,000/– ವರೆಗೆ ಆದಾಯ ಗಳಿಸುತ್ತಿದ್ದಾರೆ. ಅಲ್ಲದೆ ತಾವು ಬೆಳೆದ ಕಬ್ಬಿನಿಂದ ಬೆಲ್ಲ ತಯಾರಿಕೆ ಸಹ ಮಾಡಿ ಮಾರಾಟ ಮಾಡುತ್ತಿದ್ದಾರೆ.

ಕಬ್ಬಿನಲ್ಲಿ ಅಂತರ ಬೆಳೆ: 12 ಅಡಿ ಅಂತರದ ಪಟದಲ್ಲಿ ಲಭ್ಯವಿರುವ ಜಾಗದಲ್ಲಿ ವಿವಿಧ ಬ್ಯಾಚ್‌ಗಳಲ್ಲಿ ಮೆಂತ್ಯ, ಪಾಲಕ್, ಸಪ್ಪಿಗೆ, ಕೊತ್ತಂಬರಿ, ಕಿಲಕಿರೆ, ದಂಟು ಸೊಪ್ಪು ಹಾಗೂ ಬೆಂಡೆ ಬೆಳೆಗಳನ್ನು ಬೆಳೆಯುತ್ತಿರುವುದನ್ನು ಸಿ.ಇ.ಒ. ಗಮನಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

# ಗ್ಯಾರಂಟಿ ಯೋಜನೆಗಳು ಜನರ ಆರ್ಥಿಕ ಭದ್ರತೆಗೆ ಸಹಕಾರಿ: ನಿತಿನ್ ವೆಂಕಟೇಶ್

**ಪಿರಿಯಾಪಟ್ಟಣ:** ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ಮಹಿಳೆಯರು, ಯುವಕರು ಹಾಗೂ ಸಾಮಾನ್ಯ ಜನರ ಬದುಕಿಗೆ ಆರ್ಥಿಕ ಭದ್ರತೆ ಒದಗಿಸುವ ಮೂಲಕ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ನೆರವಾಗಿವೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಆಡಳಿತ ಸಭಾಂಗಣದಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ವತಿಯಿಂದ ಆಯೋಜಿಸಿದ್ದ ?ಸಾಧನೆಯ ಮೂರು ವರ್ಷಗಳು? ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಯುವನಿಧಿ ಹಾಗೂ ಅನ್ನಭಾಗ್ಯ ಯೋಜನೆಗಳನ್ನು ತಾಲೂಕಿನ ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸಲಾಗಿದ್ದು, ಜನಸಾಮಾನ್ಯರು, ಮಹಿಳೆಯರು ಮತ್ತು ಯುವಕರು ಆರ್ಥಿಕವಾಗಿ ಸಬಲರಾಗಲು ಇವು ಸಹಕಾರಿಯಾಗಿವೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಸುಮಾರು 55 ಸಾವಿರ ಕೋಟಿ ರೂ ಅನುದಾನ ಮೀಸಲಿಟ್ಟಿದ್ದು, ತಾಲೂಕಿನ ಸಾವಿರಾರು ಕುಟುಂಬಗಳು ಈ ಯೋಜನೆಗಳ ಪ್ರಯೋಜನ ಪಡೆಯುತ್ತಿವೆ. ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರಿಗೆ ಆರ್ಥಿಕ ನೆರವು ದೊರೆತಿದ್ದು, ಪ್ರತಿದಿನ ಸುಮಾರು 35 ಸಾವಿರ ಮಹಿಳೆಯರು ಶಕ್ತಿ ಯೋಜನೆಯಡಿ ಉಚಿತ ಪ್ರಯಾಣ ಸೌಲಭ್ಯ ಬಳಸುತ್ತಿದ್ದಾರೆ. ಗೃಹಜ್ಯೋತಿ ಯೋಜನೆಯಡಿ ಕೋಟ್ಯಂತರ ರೂಪಾಯಿ ಮೌಲ್ಯದ ವಿದ್ಯುತ್ ಸಬ್ಸಿಡಿ ನೀಡಲಾಗಿದ್ದು, ಅನ್ನಭಾಗ್ಯ ಹಾಗೂ ಯುವನಿಧಿ ಯೋಜನೆಗಳ ಮೂಲಕವೂ ಯುವಕರು ಪ್ರಯೋಜನ ಪಡೆದಿದ್ದಾರೆ ಎಂದರು.

ಚುನಾವಣಾ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಕುರಿತು ವಿರೋಧ ಪಕ್ಷಗಳು ಟೀಕೆ ಮಾಡಿದ್ದರೂ, ಈಗ ಈ ಪಂಚ ಯೋಜನೆಗಳು ಯಶಸ್ವಿಯಾಗಿ ಜಾರಿಯಾದ ಬಳಿಕ ಇತರ ರಾಜ್ಯಗಳೂ ಇದೇ ಮಾದರಿಯನ್ನು ಅನುಸರಿಸುತ್ತಿವೆ ಇದು ನಮ್ಮ ರಾಜ್ಯದ ಹೆಮ್ಮೆ ಎಂದರು.

ಈ ಯೋಜನೆಗಳಿಂದ ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಹೊಂದಿ ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದ್ದು, ರಾಜ್ಯವನ್ನು ಹಸಿವು ಮುಕ್ತಗೊಳಿಸುವ ನಿಟ್ಟಿನಲ್ಲಿ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿ ಮೂಲಕ ಬಡವರ ಹಸಿವು ನೀಗಿಸುವಲ್ಲಿ ಸರ್ಕಾರ ಸಾಕಾರಗೊಳಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಇ ಒ ಸುನೀಲ್ ಕುಮಾರ್, ಸರ್ಕಾರದ ಕಲ್ಯಾಣ ಯೋಜನೆಗಳು ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ತಲುಪುವ ಗುರಿ ಹೊಂದಿದ್ದು ಇದು ಸುಗಮವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಮಹಿಳಾ ಫಲಾನುಭವಿಗಳು ಗ್ಯಾರಂಟಿ ಯೋಜನೆಗಳಿಂದ ತಮ್ಮ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಿರುವ ಕುರಿತು ಅನುಭವ ಹಂಚಿಕೊಂಡರು.

ಜಿಲ್ಲಾ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಕರೀಗೌಡ, ಧನರಾಜ್, ಆಯತನಹಳ್ಳಿ ಮಹದೇವ್ ಹಾಗೂ ಇತರರು ಮಾತನಾಡಿದರು.ಸಿಡಿಪಿಒ ವೀಣಾ,ಪಂಚ ಗ್ಯಾರಂಟಿ ಯೋಜನೆ ಸದಸ್ಯರಾದ ವಿಂದ್ಯಾ,ರವಿ ಚಪ್ಪರದಹಳ್ಳಿ, ಹರ್ಷದ್, ಸುರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



# ಅರ್ಹರು ಪಟ್ಟಿಯಿಂದ ಕೈಬಿಡದೆ, ಅನರ್ಹರು ಸೇರ್ಪಡೆಯಾಗದಂತೆ ಕಟ್ಟುನಿಟ್ಟಿನ ಕ್ರಮ : ಡಿಸಿ

**ಮಂಡ್ಯ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ?2026ರ ಕಾರ್ಯವನ್ನು ನಿಗದಿತ ವೇಳಾಪಟ್ಟಿಯಂತೆ ಪಾರದರ್ಶಕ ಹಾಗೂ ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಅರ್ಹ ಮತದಾರರು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಹಾಗೂ ಅನರ್ಹ ಮತದಾರರು ಪಟ್ಟಿಗೆ ಸೇರ್ಪಡೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ?2026ರ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿಯ ಶುದ್ಧತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವುದು ಚುನಾವಣಾ ಆಯೋಗದ ಪ್ರಮುಖ ಆದ್ಯತೆಯಾಗಿದ್ದು, ಪ್ರತಿಯೊಂದು ಮಾಹಿತಿಯನ್ನು ನಿಖರವಾಗಿ ಪರಿಶೀಲಿಸಿ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.



ಮನೆ ಮನೆಗೆ ಭೇಟಿ ನೀಡಿ ವಿತರಿಸಲಾದ ಗಣತಿ ನಮೂನೆಗಳನ್ನು ಹಿಂಪಡೆಯುವ ಕಾರ್ಯ ಪ್ರಗತಿಯಲ್ಲಿದ್ದು, ಆಗಸ್ಟ್ 8, 2026 ನಮೂನೆ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮತದಾರರು ಭರ್ತಿ ಮಾಡಿದ ನಮೂನೆಗಳನ್ನು ನಿಗದಿತ ಅವಧಿಯೊಳಗೆ ಹಿಂದಿರುಗಿಸುವ ಮೂಲಕ ಪರಿಷ್ಕರಣೆ ಕಾರ್ಯಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಕಸ ವಿಲೇವಾರಿ ವಾಹನಗಳಲ್ಲಿ ಜಿಂಗಲ್‌ಗಳನ್ನು ಅಳವಡಿಸಿ ಮತದಾರರಲ್ಲಿ ಜಾಗೃತಿ ಮೂಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಒಟ್ಟು 15,75,849 ಮತದಾರರ ಪೈಕಿ ಇದುವರೆಗೆ 13,94,203 (88.47%) ಮತದಾರರ ಗಣತಿ ನಮೂನೆಗಳನ್ನು ಗಣಕೀಕರಣ ಮಾಡಲಾಗಿದೆ. ಜೊತೆಗೆ 1,49,347 (9.48%) ಮತದಾರರನ್ನು ASDDO (Absent, Shifted, Death, Duplicate, Others) ವಿಭಾಗದಡಿ ಗುರುತಿಸಲಾಗಿದೆ ಎಂದು ಮಾಹಿತಿ ನೀಡಲಾಯಿತು.

ಗುರುತಿಸಲಾದವರ ಪೈಕಿ 41,589 ಮಂದಿ ಮೃತ ಮತದಾರರು, 17,240 ಮಂದಿ ಗೈರು ಮತದಾರರು, 76,720 ಮಂದಿ ಶಾಶ್ವತವಾಗಿ ಸ್ಥಳಾಂತರಗೊಂಡಿರುವ ಮತದಾರರು, 13,377 ಮಂದಿ ಪುನರಾವರ್ತಿತ ಮತದಾರರು ಹಾಗೂ 421 ಮಂದಿ ಗಣತಿ ನಮೂನೆಯನ್ನು ಹಿಂದಿರುಗಿಸಲು ನಿರಾಕರಿಸಿರುವ ಮತದಾರರಾಗಿದ್ದಾರೆ ಎಂದು ಸಭೆಯಲ್ಲಿ ವಿವರಿಸಿದರು. ಮನೆ ಮನೆ ಸಮೀಕ್ಷೆಯಲ್ಲಿ ಈಗಾಗಲೇ ವಿತರಿಸಲಾದ ನಮೂನೆಗಳ ಪೈಕಿ 32,299 (2.05%) ನಮೂನೆಗಳ ಸಂಗ್ರಹಣೆ ಹಾಗೂ ಗಣಕೀಕರಣ ಬಾಕಿಯಿದ್ದು, ಮುಂದಿನ ಮೂರುರಿಂದ ನಾಲ್ಕು ದಿನಗಳೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ನಡೆಯುತ್ತಿರುವ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಪ್ರತಿ ದಿನದ ಪ್ರಗತಿ ವಿವರವನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಮಾಧ್ಯಮಗಳಿಗೆ ನಿಯಮಿತವಾಗಿ ನೀಡಲಾಗುತ್ತಿದ್ದು, ಸಂಪೂರ್ಣ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯೊಂದಿಗೆ ಈ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ, ASDDO ವಿಭಾಗದಡಿ ಗುರುತಿಸಲಾದ ಮತದಾರರ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಲು ವಿಶೇಷ ತಂಡಗಳನ್ನು ರಚಿಸಿ ಮರುಪರಿಶೀಲನೆ ನಡೆಸುವಂತೆ ಮೇಲ್ವಿಚಾರಕರಿಗೆ ಸೂಚನೆ ನೀಡಲಾಗುತ್ತದೆ. ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ತಪ್ಪದೇ ಉಳಿಯುವಂತೆ ಹಾಗೂ ಅನರ್ಹರ ಸೇರ್ಪಡೆಯಾಗದಂತೆ ನಿಖರ ಪರಿಶೀಲನೆಗೆ ಆದ್ಯತೆ ನೀಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಆಗಸ್ಟ್ 17, 2026ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಬಳಿಕ ಆಗಸ್ಟ್ 17ರಿಂದ ಸೆಪ್ಟೆಂಬರ್ 16, 2026ರವರೆಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗುವುದು. ಈ ಅವಧಿಯನ್ನು ಸದುಪಯೋಗಪಡಿಸಿಕೊಂಡು ಮತದಾರರು ತಮ್ಮ ಹೆಸರು ಹಾಗೂ ವಿವರಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿಗಳನ್ನು ಮಾಡಿಸಿಕೊಳ್ಳುವಂತೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ,ಜಿಲ್ಲಾಧಿಕಾರಿಗಳ ಕಚೇರಿಯ ತಹಸೀಲ್ದಾರ್ ರಾದ ರವಿಶಂಕರ್ ಮತ್ತು ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳು ಉಪಸ್ಥಿತರಿದ್ದರು.

# ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣಕ್ಕೆ ಯುವಜನತೆಯೂ ಕೈಜೋಡಿಸಬೇಕು

**ಮಂಡ್ಯ:** ಸಮಾಜವನ್ನು ಡ್ರಗ್ಸ್ ಹಾಗೂ ಮಾದಕ ವಸ್ತುಗಳ ಹಾವಳಿಯಿಂದ ಮುಕ್ತಗೊಳಿಸಲು ಯುವಜನತೆ ಜವಾಬ್ದಾರಿಯುತವಾಗಿ ಕೈಜೋಡಿಸಬೇಕು. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ವ್ಯಸನಗಳಿಂದ ದೂರವಿರುವ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ವೆಂಕಟೇಶ್ ತಿಳಿಸಿದರು.



ಇಂದು ಮಂಡ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಂಡ್ಯ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ. ಪೊಲೀಸ್ ಇಲಾಖೆ ಹಾಗೂ ಮಂಡ್ಯ ವಿಶ್ವವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಶ್ರೀ ಮ.ನಿ.ಪ್ರ.ಡಾ. ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ* ವ್ಯಸನ ಮುಕ್ತ ದಿನಾಚರಣೆ

ಮಾದಕ (ಡ್ರಗ್ಸ್) ವ್ಯಸನ ವಿರೋಧಿ, ಬಾಲ್ಯವಿವಾಹ, ಪೋಕೋ ಕಾಯ್ದೆ ಬಾಲಗರ್ಭಿಣಿ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಉದ್ಘಾಟಿಸಿ ಮಾತನಾಡಿದರು.

ಮಾದಕ ವಸ್ತು ಬಳಕೆಯಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯ ಹಾಳಾಗುತ್ತದೆ. ಇಂದಿನ ಯುವ ಜನತೆ ಭಗತ್ ಸಿಂಗ್.ವಿವೇಕಾನಂದ. ಅಂಬೇಡ್ಕರ್ ರವರ ಆದರ್ಶವನ್ನು ಪಾಲಿಸಬೇಕು ಡ್ರಗ್ಸ್ ಮುಕ್ತ ಭಾರತಕ್ಕೆ ಯುವ ಜನತೆ ಸಂಕಲ್ಪ ಮಾಡಬೇಕು ಎಂದರು

ಯುವಕರು ಯಾವುದೇ ರೀತಿಯ ಮಾದಕ ವಸ್ತುಗಳಿಗೆ ಬಲಿಯಾಗದೆ ಆರೋಗ್ಯಕರ, ಶಿಸ್ತುಬದ್ಧ ಹಾಗೂ ಜವಾಬ್ದಾರಿಯುತ ಜೀವನ ನಡೆಸುವುದು ಅತ್ಯಂತ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಡ್ರಗ್ಸ್ ಎಂಬ ಮಾದಕ ವಸ್ತುಗಳು ವಿಶ್ವದಾದ್ಯಂತ ಯುವಜನತೆಯ ಭವಿಷ್ಯವನ್ನು ಹಾಳುಮಾಡುತ್ತಿರುವ ಗಂಭೀರ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿವೆ. ಕ್ಷಣಿಕ ಸುಖ ಮತ್ತು ದುಷ್ಟ ಸಹವಾಸದ ಕಾರಣದಿಂದ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳಬಾರದು. ಮಾದಕ ವಸ್ತುಗಳ ಸೇವನೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುತ್ತದೆ. ಒಮ್ಮೆ ವ್ಯಸನಕ್ಕೆ ಒಳಗಾದರೆ ಅದರಿಂದ ಹೊರಬರುವುದು ಅತ್ಯಂತ ಕಷ್ಟಕರವಾಗಿರುವುದರಿಂದ ಪ್ರತಿಯೊಬ್ಬ ಯುವಕ–ಯುವತಿಯೂ ವ್ಯಸನಗಳಿಂದ ದೂರವಿರಬೇಕು ಎಂದು ಕಿವಿಮಾತು ಹೇಳಿದರು.

ಮಾದಕ ವಸ್ತುಗಳು ಮಾನವನ ಮೆದುಳು, ನರಮಂಡಲ ಹಾಗೂ ದೇಹದ ವಿವಿಧ ಅಂಗಾಂಗಗಳ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಕುಟುಂಬ ಮತ್ತು ಸಮಾಜದ ನೆಮ್ಮದಿಯನ್ನೂ ಹಾಳುಮಾಡುತ್ತವೆ. ಆದ್ದರಿಂದ ಯುವಜನತೆ ವ್ಯಸನದ ದುಷ್ಪರಿಣಾಮಗಳ ಬಗ್ಗೆ ತಮ್ಮ ಸ್ನೇಹಿತರು, ಸಹಪಾಠಿಗಳು ಹಾಗೂ ಮುಂದಿನ ಪೀಳಿಗೆಗೆ ಅರಿವು ಮೂಡಿಸುವ ಸಾಮಾಜಿಕ ಜವಾಬ್ದಾರಿಯನ್ನು ವಹಿಸಬೇಕು ಎಂದು ತಿಳಿಸಿದರು.

ವ್ಯಸನಮುಕ್ತ ಮನಸ್ಸಿನಿಂದಲೇ ವ್ಯಸನಮುಕ್ತ ಸಮಾಜ ನಿರ್ಮಾಣ ಸಾಧ್ಯ. ದೈಹಿಕವಾಗಿ ಸದೃಢರಾಗಿದ್ದರೆ ಮಾನಸಿಕವಾಗಿಯೂ ಸದೃಢರಾಗಲು ಸಾಧ್ಯ.

ವಿದ್ಯಾರ್ಥಿಗಳು ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಡ್ರಗ್ಸ್ ಹಾಗೂ ಇತರೆ ದುಶ್ಚಟಗಳಿಂದ ಸಂಪೂರ್ಣವಾಗಿ ದೂರವಿರಬೇಕು. ಉತ್ತಮ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ, ಶಿಸ್ತು ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಿಕೊಂಡು ಸಮಾಜಕ್ಕೆ ಆದರ್ಶ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಶಾಲಾ–ಕಾಲೇಜುಗಳ ಸುತ್ತಮುತ್ತ ಅಥವಾ ಸಮಾಜದಲ್ಲಿ ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆ ಅಥವಾ ಮಾರಾಟ ನಡೆಯುತ್ತಿರುವುದು ಕಂಡುಬಂದರೆ ಮೌನವಾಗಿರದೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಗೆ ತಕ್ಷಣ ಮಾಹಿತಿ ನೀಡಬೇಕು. ಹದಿಹರೆಯದ ಮಕ್ಕಳು ವ್ಯಸನದ ಬಲೆಗೆ ಸಿಲುಕದಂತೆ ಪೋಷಕರು, ಶಿಕ್ಷಕರು ಹಾಗೂ ಸಮಾಜದ ಪ್ರತಿಯೊಬ್ಬರೂ ಜಾಗರೂಕರಾಗಿರಬೇಕು ಎಂದು ತಿಳಿಸಿದರು.

ಯುವಜನತೆ ವ್ಯಸನಮುಕ್ತ ಜೀವನವನ್ನು ಅಳವಡಿಸಿಕೊಂಡು ದೇಶಪ್ರೇಮ, ಕಾನೂನು ಪಾಲನೆ, ಪೋಷಕರಿಗೆ ಗೌರವ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬ ಯುವಕ–ಯುವತಿಯ ಸಂಕಲ್ಪದಿಂದಲೇ ಡ್ರಗ್ಸ್ ಮುಕ್ತ, ಆರೋಗ್ಯವಂತ ಹಾಗೂ ಸುರಕ್ಷಿತ ಸಮಾಜ ನಿರ್ಮಾಣ ಸಾಧ್ಯ ಎಂದು ವೆಂಕಟೇಶ್ ಅಭಿಪ್ರಾಯಪಟ್ಟರು.

ಪ್ರಾಸ್ತವಿಕ ನುಡಿಗಳನ್ನಾಡಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಎನ್. ಟಿ. ಯೋಗೇಶ್ ಮಾತನಾಡಿ ವ್ಯಸನ ಮುಕ್ತ ರಾಜ್ಯವನ್ನಾಗಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಜಾಗೃತಿ ಹಾಗೂ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಿದೆ. ಭಿಕ್ಷೆಯ ರೂಪದಲ್ಲಿ ವ್ಯಸನ ಮುಕ್ತ ಮಾಡಲು ಪ್ರತಿಜ್ಞೆಯನ್ನು ಮಾಡಿದವರು ಮಹಾಂತ ಶಿವಯೋಗಿ ಸ್ವಾಮೀಜಿಗಳು ಅವರ ಜಯಂತಿ ಆಚರಣೆ ಆದರ್ಶನಿಯ ಎಂದರು. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಪ್ರಾದೇಶಿಕ ನಿರ್ದೇಶಕ ಮಹದೇವ್ ರವರು ಮಾತನಾಡಿ ಹೆಣ್ಣು ಮಕ್ಕಳು ತಮ್ಮ ಮೇಲೆ ನಡೆಯುವ ಯಾವುದೇ ದೌರ್ಜನ್ಯವನ್ನು ಸಮಾಜ ಮುಂದೆ ಧೈರ್ಯವಾಗಿ ಎದುರಿಸುವ ಸಾಮರ್ಥ್ಯವನ್ನು ರೂಡಿಸಿಕೊಳ್ಳಬೇಕು. ಹೊರಗೆ ಹೋದ ಹೆಣ್ಣು ಮಕ್ಕಳು ಜಾಗೃತಿಯಿಂದ ಇರುವುದು ಸೂಕ್ತ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಕ್ಲಿನಿಕಲ್ ಸೈಕಾಲಜಿಸ್ಟ್ ಮೊಹಮದ್ ಸುಹೇಲ್ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಜನತೆ ಮತ್ತು ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಇದರ ಬಗ್ಗೆ ಸಮಾಜದಲ್ಲಿ ವ್ಯಾಪಕ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು.

ಧೂಮಪಾನ, ಮದ್ಯಪಾನ ಹಾಗೂ ಇತರೆ ಮಾದಕ ವಸ್ತುಗಳ ಸೇವನೆಯಿಂದ ಮೆದುಳಿನಲ್ಲಿ ಡೋಪಮೀನ್ ಸೇರಿದಂತೆ ಕೆಲವು ರಾಸಾಯನಿಕಗಳ ಉತ್ಪತ್ತಿಯಾಗಿ ತಾತ್ಕಾಲಿಕ ಸಂತೋಷದ ಅನುಭವ ಉಂಟಾಗುತ್ತದೆ. ಆದರೆ ಇದೇ ಕ್ರಮೇಣ ಚಟವಾಗಿ ವ್ಯಕ್ತಿಯನ್ನು ವ್ಯಸನಕ್ಕೆ ದೂಡುತ್ತದೆ. ವ್ಯಸನವು ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಜೀವನದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ ಎಂದು ಅವರು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಜೀವನ, ಮಾನಸಿಕ ಒತ್ತಡ, ಆತಂಕ, ಸ್ನೇಹಿತರ ಪ್ರಭಾವ ಹಾಗೂ ಸಾಮಾಜಿಕ ಜಾಲತಾಣಗಳ ಪರಿಣಾಮದಿಂದ ಕೆಲ ಯುವಕರು ಮಾದಕ ವಸ್ತುಗಳತ್ತ ಆಕರ್ಷಿತರಾಗುತ್ತಿದ್ದಾರೆ. ಯಾವುದೇ ಸಮಸ್ಯೆಗೆ ಮಾದಕ ವಸ್ತುಗಳು ಪರಿಹಾರವಲ್ಲ. ಒತ್ತಡ ನಿವಾರಣೆಗೆ ಯೋಗ, ಧ್ಯಾನ, ಕ್ರೀಡೆ, ಸಂಗೀತ, ಪುಸ್ತಕ ಓದು ಹಾಗೂ ಕುಟುಂಬದವರೊಂದಿಗೆ ಮುಕ್ತ ಸಂವಾದ ನಡೆಸುವಂತಹ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ಸಂಪೂರ್ಣ ದೂರವಿದ್ದು ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಉತ್ತಮ ವ್ಯಕ್ತಿತ್ವ ನಿರ್ಮಾಣದತ್ತ ಗಮನಹರಿಸಬೇಕು. ಪೋಷಕರು ಮಕ್ಕಳ ವರ್ತನೆ, ಸ್ನೇಹ ಬಳಗ ಹಾಗೂ ದೈನಂದಿನ ಚಟುವಟಿಕೆಗಳ ಬಗ್ಗೆ ಕಾಳಜಿ ವಹಿಸಿ, ಯಾವುದೇ ಅನುಮಾನಾಸ್ಪದ ಲಕ್ಷಣಗಳು ಕಂಡುಬಂದರೆ ತಕ್ಷಣ ತಜ್ಞರ ಸಲಹೆ ಪಡೆಯಬೇಕು ಎಂದು ಅವರು ತಿಳಿಸಿದರು.

ಇದೆ ಸಂದರ್ಭದಲ್ಲಿ ವ್ಯಸನ ಮುಕ್ತ ಸಮಾಜಕ್ಕೆ ಕೈಜೋಡಿಸುವುದಾಗಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಸ್ವೀಕಾರ ಮಾಡಿದರು.

ವೇದಿಕೆಯಲ್ಲಿ ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಪುಷ್ಪಲತಾ ಎಂ. ಸಿ.ತಂಬಾಕು ನಿಯಂತ್ರಣ ಕೋಶ ಅಧಿಕಾರಿಗಳಾದ ತಿಮ್ಮರಾಜು. ಸಿ ಡಬ್ಲ್ಯೂ ಸಿ ಅಧ್ಯಕ್ಷರಾದ ಸುಮಿತ್ರ, ಮುಖಂಡರಾದ ಚಿಕ್ಕಯ್ಯ. ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತರಾದ ಬಿ. ಎಸ್. ಅನುಪಮಾ. ರಕ್ಷಣಾ ಅಧಿಕಾರಿ ರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಕೊಡಗು ಜಿಲ್ಲೆಯ ಮಳೆ ವಿವರ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಶನಿವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 56.79 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 9.55 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 992.11 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 2141.72 ಮಿ.ಮೀ ಮಳೆಯಾಗಿತ್ತು.

ಮಡಿಕೇರಿ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 86.08 ಮಿ.ಮೀ. ಕಳೆದ ವರ್ಷ ಇದೇ ದಿನ 25.05 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1468.32 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 3222.77 ಮಿ.ಮೀ. ಮಳೆಯಾಗಿತ್ತು.

ವಿರಾಜಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 35.55 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 2.65 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 952.27 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1942.55 ಮಿ.ಮೀ. ಮಳೆಯಾಗಿತ್ತು.

ಪೊನ್ನಂಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 29.43 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 2.78 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 987.35 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2021.41 ಮಿ.ಮೀ. ಮಳೆಯಾಗಿತ್ತು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 23.90 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 7.45 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1115.88 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2430.72 ಮಿ.ಮೀ. ಮಳೆಯಾಗಿತ್ತು.

ಕುಶಾಲನಗರ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 39 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 9.80 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 436.54 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 1091.09 ಮಿ.ಮೀ. ಮಳೆಯಾಗಿತ್ತು.

ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರ:–ಮಡಿಕೇರಿ 86, ನಾಪೋಕ್ಲು 45.20, ಸಂಪಾಜೆ 87.50, ಭಾಗಮಂಡಲ 125.60, ವಿರಾಜಪೇಟೆ 33.60, ಅಮ್ಮತ್ತಿ 37.50, ಹುದಿಕೇರಿ 28.70, ಶ್ರೀಮಂಗಲ 68, ಪೊನ್ನಂಪೇಟೆ 15, ಬಾಳೆಲೆ 6.01, ಸೋಮವಾರಪೇಟೆ 103.40, ಶನಿವಾರಸಂತೆ 52, ಶಾಂತಳ್ಳಿ 180, ಕೊಡ್ಲಿಪೇಟೆ 40.20, ಕುಶಾಲನಗರ 31.80, ಸುಂಟಿಕೊಪ್ಪ 46.20 ಮಿ.ಮೀ.ಮಳೆಯಾಗಿದೆ.

**ಹಾರಂಗಿ ಜಲಾಶಯದ ನೀರಿನ ಮಟ್ಟ (01–08–2026) ವರದಿ:** ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳು, ಇಂದಿನ ನೀರಿನ ಮಟ್ಟ 2857.83 ಅಡಿಗಳು. ಕಳೆದ ವರ್ಷ ಇದೇ ದಿನ 2855.46 ಅಡಿಗಳು. ಹಾರಂಗಿಯಲ್ಲಿ ಬಿದ್ದ ಮಳೆ 39.60 ಮಿ.ಮೀ., ಕಳೆದ ವರ್ಷ ಇದೇ ದಿನ 3.20 ಮಿ.ಮೀ., ಇಂದಿನ ನೀರಿನ ಒಳಹರಿವು 9896 ಕ್ಯುಸೆಕ್, ಕಳೆದ ವರ್ಷ ಇದೇ ದಿನ 4817 ಕ್ಯುಸೆಕ್., ಇಂದಿನ ನೀರಿನ ಹೊರ ಹರಿವು ನದಿಗೆ 10058 ಕ್ಯುಸೆಕ್. ಕಳೆದ ವರ್ಷ ಇದೇ ದಿನ ನೀರಿನ ಹೊರ ಹರಿವು ನದಿಗೆ 3000 ಕ್ಯುಸೆಕ್. ನಾಲೆಗೆ 500 ಕ್ಯುಸೆಕ್.

# ಸ್ನೇಹ ಲೋಕದಲ್ಲಿ ಸ್ನೇಹದ ಸಂಗೀತ




ನೆನಪುಗಳ ಪುಟ ತೆರೆದಾಗಲೆಲ್ಲ ಕಣ್ಣುಗಳ ಮುಂದೆ ಹಾದುಹೋಗುವುದು ಆ ಹಸಿರು ದಿನಗಳ ಚಿತ್ತಾರ. ಕಾಲದ ನದಿಯಲ್ಲಿ ನಲವತ್ತೆರಡು ವರ್ಷಗಳು ಕೊಚ್ಚಿಕೊಂಡು ಹೋಗಿದ್ದರೂ, ಗೆಳೆತನದ ಸವಿ ಮಾತ್ರ ಎಂದಿನಂತೆಯೇ ಹಸಿರಾಗಿದೆ. 1981ರಿಂದ 1984ರ ಅವಧಿ. ನಾವು ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಓದುತ್ತಿದ್ದ ದಿನಗಳು. ಕಾಲೇಜಿನ ಮೊದಲ ದಿನವೇ ಒಂದಾದ ನಮ್ಮ ಬಳಗ, ಇಂದಿಗೂ ಅದೇ ಪ್ರೀತಿ ಮತ್ತು ಕಿಡಿಗೇಡಿತನವನ್ನು ಉಳಿಸಿಕೊಂಡು ಬಂದಿದೆ. ಕಾಲೇಜು ಮುಗಿದ ಮೇಲೆ ಪ್ರತಿಯೊಬ್ಬರೂ ಬದುಕಿನ ಬೇರೆ ಬೇರೆ ಹಾದಿ ತುಳಿದೆವು. ಆದರೂ ಮನಸ್ಸುಗಳು ದೂರವಾಗಲಿಲ್ಲ. ಇತ್ತೀಚಿನ ಸೋಷಿಯಲ್ ಮೀಡಿಯಾ ನಮ್ಮೆಲ್ಲರನ್ನೂ ಮತ್ತೆ ಹತ್ತಿರಕ್ಕೆ ತಂದಿದೆ

ಆ ಕಾಲವೇ ಹಾಗಿತ್ತು; ಕಾಲೇಜು ಎಂದರೆ ಬರೀ ಪಾಠ–ಪ್ರವಚನವಲ್ಲ, ಮುಷ್ಕರಗಳ ತವರೂರು! ಕೆ.ಎಸ್.ಆರ್.ಟಿ.ಸಿ ಬಸ್ ದರ ಹೆಚ್ಚಾಗಲಿ ಅಥವಾ ಕಾಲೇಜು ಫೀಸ್ ಏರಲಿ, ಮರುದಿನವೇ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದೆವು. ತಿಂಗಳಲ್ಲಿ ಹೆಚ್ಚು ದಿನ ತರಗತಿಯಲ್ಲಿದ್ದದ್ದಕ್ಕಿಂತ ಬೀದಿಯಲ್ಲಿದ್ದದ್ದೇ ಹೆಚ್ಚು!

ತರಗತಿಗಳಲ್ಲಿ ಪಾಠ ಕೇಳುವುದಕ್ಕಿಂತ ಸಿನಿಮಾ ಕೊಟಡಿಗಳೇ ನಮಗೆ ಹೆಚ್ಚು ಪ್ರಿಯವಾಗಿದ್ದವು. ನಮ್ಮ ಗೆಳೆಯ ಸೀನಾ ಹಿಂದಿ ಸಿನಿಮಾಗಳ ಹುಚ್ಚನಾಗಿದ್ದ. ನನಗೋ ಹಿಂದಿಯ ಒಂದಕ್ಷರವೂ ತಿಳಿಯುತ್ತಿರಲಿಲ್ಲ, ಹಾಗಾಗಿ ನಾನು ಆ ಸಾಹಸಕ್ಕೆ ಹೋಗುತ್ತಿರಲಿಲ್ಲ. ನಾನು, ಮಹೇಶ್ ಮತ್ತು ಗಣೇಶ್ ಮಾತ್ರ ಡಾ. ರಾಜ್‌ಕುಮಾರ್ ಅಭಿನಯದ ಸಿನಿಮಾಗಳೆಂದರೆ ಪ್ರಾಣ ಬಿಡುತ್ತಿದ್ದೆವು. 'ಕವಿರತ್ನ ಕಾಳಿದಾಸ' ಮತ್ತು 'ಭಕ್ತ ಪ್ರಹ್ಲಾದ' ಸಿನಿಮಾಗಳ ಮೊದಲ ದಿನದ ಮೊದಲ ಪ್ರದರ್ಶನದ ಟಿಕೆಟ್‌ಗಾಗಿ ಮುಂಜಾನೆ 5 ಗಂಟೆಗೇ ಥಿಯೇಟರ್ ಮುಂದೆ ಸಾಲಿನಲ್ಲಿ ನಿಲ್ಲುತ್ತಿದ್ದೆವು. ಶ್ಯಾಮ್ ಸುಂದರ್ ಹಾಗೂ ರಂಜಿತ್ ಚಿತ್ರಮಂದಿರಗಳು ನಮ್ಮ ನೆಚ್ಚಿನ ಅಡಗುತಾಣಗಳಾಗಿದ್ದವು.

ಉಪಾಧ್ಯಾಯರನ್ನು ಗೋಳು ಹೊಯ್ದುಕೊಳ್ಳುವುದರಲ್ಲೂ ನಮಗೆ ಅಪಾರ ಆನಂದ. ಕೆಲವು ಉಪಾಧ್ಯಾಯರು ನಮಗೆ ಬೇಸತ್ತು, "ಓದಲು ಬರುವುದಿದ್ದರೆ ತರಗತಿಯಲ್ಲಿ ಕುಳಿತುಕೊಳ್ಳಿ. ಬರೀ ಅಟೆಂಡೆನ್ಸ್ ಬೇಕಿದ್ದರೆ ಈಗಲೇ ಕೊಡುತ್ತೇನೆ, ಹೊರಗೆ ಹೋಗಿ!" ಎನ್ನುತ್ತಿದ್ದರು. ನಾವೂ ತಡಮಾಡದೆ ಅಟೆಂಡೆನ್ಸ್ ಪಡೆದು ನೇರ ಸಿನಿಮಾ ಹಾಲಿಗೆ ಹೋಗುತ್ತಿದ್ದೆವು.

ಪರೀಕ್ಷೆಯ ವಿಷಯಕ್ಕೆ ಬಂದರೆ, ಇಡೀ ವರ್ಷ ಗ್ರೂಪ್ ಸ್ಟಡಿ ಹೆಸರಿನಲ್ಲಿ ಹರಟೆ ಹೊಡೆಯುವುದೇ ನಮ್ಮ ಕೆಲಸವಾಗಿತ್ತು. ಆದರೆ ಕ್ರಿಕೆಟ್ ಪಂದ್ಯದ ಕೊನೆಯ ಓವರ್‌ಗಳಲ್ಲಿ ಸಿಕ್ಸರ್ ಬಾರಿಸುವಂತೆ, ಪರೀಕ್ಷೆಯ ಹಿಂದಿನ ರಾತ್ರಿ ಜಾಗರಣೆ ಮಾಡಿ ಹೇಗೋ ಪಾಸಿಟಿವ್ ರಿಸಲ್ಟ್ ತರುತ್ತಿದ್ದೆವು.

ನಮ್ಮ ಗುಂಪಿನ ಪ್ರತಿಯೊಬ್ಬರಿಗೂ ಒಂದೊಂದು ವಿಶಿಷ್ಟ ಸ್ವಭಾವವಿತ್ತು. ಹರ್ಷ ಎನ್ನುವ ಗೆಳೆಯ ಯಾವಾಗಲೂ ಕೈಯಲ್ಲೊಂದು ಟಾರ್ಚ್ ಇಟ್ಟುಕೊಂಡೇ ತಿರುಗುತ್ತಿದ್ದ, ಅವನೇಕೆ ಟಾರ್ಚ್ ಹಿಡಿಯುತ್ತಿದ್ದನೆಂದು ಇಂದಿಗೂ ನಮಗೆ ಒಗಟೇ! ಇನ್ನು ಸೀನಾ ಎನ್ನುವ ನಗೆಯ ಬುಗ್ಗೆ, ಸೈಕಲ್ ಕ್ಯಾರಿಯರ್‌ನಲ್ಲಿ ಒಂದೇ ಒಂದು ನೋಟ್‌ಬುಕ್ ಇಟ್ಟುಕೊಂಡು ಕಾಲೇಜಿಗೆ ಬರುತ್ತಿದ್ದ. ವಿಷಯ ಯಾವುದಿದ್ದರೂ ಪುಸ್ತಕ ಮಾತ್ರ ಅದೇ ಒಂದೇ!

ವಿಶ್ವನ ಧ್ವನಿ ಸ್ವಲ್ಪ ನಡುಕ್ತಾ ಇತ್ತು. ಅದಕ್ಕೆ ಸೀನ ಅವನಿಗೆ ಇಟ್ಟ ಅಡ್ಡ ಹೆಸರು ಶೇಕ್ ಅಬ್ದುಲ್ಲಾ .

ಸುದರ್ಶನ್, ಯಮುನಾಚಾರ್ಯ ಮತ್ತು ನಂಜುಂಡ ಸೇರಿ ಒಂದು ಸಣ್ಣ ಲೈಬ್ರರಿ ತೆರೆದಿದ್ದರು. ಅಲ್ಲಿ ಒಂದು ಮಿಕ್ಸಿ–ಗ್ರೈಂಡರ್ ಇತ್ತು. ಅಲ್ಲಿಗೆ ಗಿರಾಕಿಗಳೇ ಇರ್ತಾ ಇರ್ಲಿಲ್ಲ. ಅದೇ ನಮ್ಮ ಪ್ರಮುಖ 'ಅಡ್ಡಾ' ಆಗಿತ್ತು! ಗಾಯತ್ರಿ ಟಿಫಿನ್ ರೂಮ್, ಪ್ರಸಾದ್ ಲಂಚ್ ಹೋಮ್, ನಂಜುಮಳಿಗೆ ಹತ್ತಿರದ ಕೃಷ್ಣ ಭವನ, ಭಗವತಿ ವಿಲಾಸ್, ಗಲ್ಲಿ ಹೋಟೆಲ್ ಹಾಗೂ ಅಗ್ರಹಾರದ ಅಯ್ಯರ್ ಲಂಚ್ ಹೋಮ್?ಹೀಗೆ ಸಂಜೆಯಾಗುತ್ತಿದ್ದಂತೆ ಯಾವುದಾದರೊಂದು ಹೋಟೆಲ್‌ನಲ್ಲಿ ತಿಂಡಿ ಹೊಡೆದು, ಸುದರ್ಶನ್ ಲೈಬ್ರರಿಯ ಅಡ್ಡಾದಲ್ಲಿ ಮಧ್ಯರಾತ್ರಿವರೆಗೂ ಹರಟೆ ಹೊಡೆಯುವುದೇ ನಮ್ಮ ದಿನಚರಿಯಾಗಿತ್ತು.

ಇದರ ಮಧ್ಯೆ ಚಾಮುಂಡಿಪುರಂನಲ್ಲಿ ಬೋಂಡಾ , ಬಜ್ಜಿ , ಬೇಕರಿಯಲ್ಲಿ ದಿಲ್ ಪಸಂದ್ , ಪಪ್ಸ್ ಸ್ವಾಹ ಆಗ್ತಾ ಇತ್ತು. ತುಂಬಾ ಮಜ ಇರ್ತಾ ಇದ್ದಿದ್ದು 2 ಇಡ್ಲಿ ತಗೊಂಡ್ರೆ ಅರ್ಧ ಬಕೆಟ್ ಚಟ್ನಿಬೇಕು. ಸಪ್ಲೈಯರ್ ಚಟ್ನಿ ಹಾಕಿ ಹಾಕಿ, ಕಡೆಗೆ ಚಟ್ನಿ ಬಕೆಟ್ ನ ನಮ್ಮ ಮುಂದೆ ಇಟ್ಟು ಹೋಗ್ತಾ ಇದ್ದ .

ಇನ್ನು ದಸರಾ ಹತ್ತು ದಿನಗಳ ಕಾಲ ಅರಮನೆ ಆವರಣದಲ್ಲಿ ತಿರುಗಾಡುವುದು, ಕಡಲೆಕಾಯಿ, ಚುರುಮುರಿ ತಿನ್ನುತ್ತಾ ಕಳೆಯುವುದು ಒಂದು ಸುಂದರ ಅನುಭವ.



ಒಮ್ಮೆ ನಾವೊಂದು ಸ್ವಾರಸ್ಯಕರ ಪಂಥ ಕಟ್ಟಿದೆವು. ಗಣೇಶ್‌ಗೆ ಒಂದು ಸವಾಲು?ಅಕ್ಕಮಣ್ಣಿ ಆಸ್ಪತ್ರೆಯಿಂದ ಗಾಯತ್ರಿ ಟಿಫಿನ್ ರೂಮ್‌ವರೆಗಿನ ಕಡಿದಾದ ತುಂಬಾ ಏರು ರಸ್ತೆಯಲ್ಲಿ ಸೈಕಲ್‌ನಲ್ಲಿ ಮೂವರನ್ನು ಕೂರಿಸಿಕೊಂಡು (ಟ್ರಿಪಲ್ ರೈಡಿಂಗ್) ತುಳಿಯಬೇಕು! ಯಶಸ್ವಿಯಾದರೆ ನಾವಿಬ್ಬರೂ ಅವನಿಗೆ ಒಂದು ಮಸಾಲೆ ದೋಸೆ ಕೊಡಿಸಬೇಕು. ಗಣೇಶ್ ಕಷ್ಟಪಟ್ಟು ಸೈಕಲ್ ತುಳಿದು ಜಯಶಾಲಿಯಾಗಿ ನಮ್ಮಿಂದ ಮಸಾಲೆ ದೋಸೆ ಗಿಟ್ಟಿಸಿಕೊಂಡಿದ್ದ! ಕಾಲೇಜಿನ ಬೀಳ್ಕೊಡುಗೆ ಸಮಾರಂಭಕ್ಕೆ ಅಂದಿನ ಖ್ಯಾತ ಪೊಲೀಸ್ ಅಧಿಕಾರಿ ಸಾಂಗ್ಲಿಯಾನ ಅವರನ್ನು ಮುಖ್ಯ ಅತಿಥಿಯಾಗಿ ಕರೆಸಿದ್ದೆವು. ನಾವೆಲ್ಲರೂ ಉತ್ಸಾಹದ ಭರದಲ್ಲಿ ಕೂಗಾಡುತ್ತಾ ಜಿಗಿಯುತ್ತಿದ್ದೆವು. ಗಣೇಶ್ ಡೆಸ್ಕ್ ಮೇಲೆ ಜಿಗಿದಾಗ ಬೆಂಚ್ ಮುರಿದು ಬಿದ್ದಿತ್ತು, ಅದೃಷ್ಟವಶಾತ್ ಯಾರಿಗೂ ಗಾಯವಾಗಲಿಲ್ಲ!

ನಮ್ಮ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಪ್ರೊ. ಬಿ. ಎನ್. ಚಕ್ರವರ್ತಿ ಅವರು ಮಹಾನ್ ವಿದ್ವಾಂಸರು. ಮೈಸೂರು ಪೇಟ, ಬಿಳಿ ಕಚ್ಚೆ ಪಂಚೆ ಉಟ್ಟು ಗಂಭೀರವಾಗಿ ಬರುತ್ತಿದ್ದರು. ಕಾಲೇಜಿನ ರೈಲ್ವೆ ಕ್ಯಾಂಟೀನ್‌ನಲ್ಲಿ ಉಪ್ಪಿಟ್ಟು, ದೋಸೆ, ಕಾಫಿ, ಬಜ್ಜಿ ಎಲ್ಲವೂ 5–10 ಪೈಸೆಗೆ ಸಿಗುತ್ತಿತ್ತು. "ಬನ್ನಿ, ಕಾಫಿ ಕೊಡಿಸುತ್ತೇನೆ" ಎಂದು ನಮ್ಮನ್ನು ಕ್ಯಾಂಟೀನ್‌ಗೆ ಕರೆದುಕೊಂಡು ಹೋಗುತ್ತಿದ್ದರು, ಆದರೆ ಎಂದೂ ಬಿಲ್ ಕೊಟ್ಟು ಕಾಫಿ ಕೊಡಿಸಲೇ ಇಲ್ಲ! ಮನೆಗೆ ಸಂಸ್ಕೃತ ಪಾಠಕ್ಕೆ ಕರೆಸುತ್ತಿದ್ದರು, ನಾವು ಹೋದಾಗ ನಿದ್ದೆ ಮಾಡುತ್ತಿರುತ್ತಿದ್ದರು, ಎಬ್ಬಿಸಿದರೆ ಬಯ್ಯುತ್ತಿದ್ದರು. ಆ ಕೋಪದಲ್ಲೂ ಒಂದು ವಾತ್ಸಲ್ಯವಿರುತ್ತಿತ್ತು.

ನೆನಪಿನ ಬುತ್ತಿ ಬಿಚ್ಚುತ್ತಾ ಹೋದರೆ ಸಾಲುಗಳು ಸಾಲುವುದಿಲ್ಲ. ಕಾಲೇಜು ದಿನಗಳು ಎಂದಿಗೂ ಮುಗಿಯದ ಕಾವ್ಯ, ಗೆಳೆಯರು ಎಂದಿಗೂ ಮಾಸದ ನೆನಪು. ಅಂದಿನ ಆ ಮುಗ್ಧತೆ, ನಗು, ಗೆಳೆತನದ ಸವಿ ಇಂದಿಗೂ ನಮ್ಮ ಬದುಕಿಗೆ ಚೈತನ್ಯ ತುಂಬುತ್ತಿರುವುದು ನಮ್ಮ ಭಾಗ್ಯ.

ನೆನಪಿನ ಬುತ್ತಿಯೊಂದಿಗೆ ಎಲ್ಲರಿಗೂ ಸ್ನೇಹಿತರ ದಿನದ ಶುಭಾಶಯಗಳು .



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಹೆಂಡತಿಗೆ ಹುಷಾರಿಲ್ಲದ ಒಂದು ದಿನ



| ಸ್ನೇಹಾ ಆನಂದ್



ಅಂದು ಹೆಂಡತಿ ಹುಷಾರಿಲ್ಲದೆ ಮಲಗಿದ್ದಳು,

ರೀ,,,, ಇವತ್ತು ಹೋಟೆಲ್ ನಿಂದ ಇಡ್ಲಿ, ಸಾಂಬಾರ್ ತಂದ್ಬಿಡಿ ಅಂದಾಗ.... ಬೇಡ ಕಣೆ ಸುಮ್ನೆ ದುಡ್ಡು ಮತ್ತು ಆರೋಗ್ಯ ಹಾಳು ಅಂತ ಅಂದು ....

ಗಂಡ ಸುಲಭವಾಗಿ ಹೇಳ್ತಾನೆ ಅದೂ ಉದಾರ ಮನಸ್ಸಿನಿಂದ ತಿಂಡಿಗೆ ಸಿಂಪಲ್ ಉಪ್ಪಿಟ್ಟು ಮಾಡು ಅಷ್ಟೇ ಸಾಕು !

ಆದ್ರೆ ಅಡುಗೆ ಗೊತ್ತಿಲ್ಲದವರಿಗೆ ಅದಕ್ಕೆ ಎಷ್ಟು ಕೆಲಸವಾಗುತ್ತದೆ ಎಂದು ತಿಳಿದಿರುವುದಿಲ್ಲ, ಬರೀ ರವೆ ಹಾಕಿ ಮಾಡಿದ್ರೆ ಕಾಂಕ್ರೀಟ್ ಇದ್ದ ಹಾಗಿದೆ ಅಂತ ಪಟ್ಟಂತ ಮಾತು ಬರುತ್ತದೆ!

ಕೊತ್ತಂಬರಿ , ನಿಂಬೆರಸ, ಹಸಿಮೆಣಸಿನಕಾಯಿ, ಈರುಳ್ಳಿ ಎಲ್ಲವನ್ನೂ ತೊಳೆದು, ಹೆಚ್ಚಿ, ರವೆ ಹುರಿಯಬೇಕು, ಒಗ್ಗರಣೆ ಮಾಡಬೇಕು ಇದೆಲ್ಲ ತಯಾರಿ ಮಾಡಿಕೊಂಡು ಹದವಾದ, ರುಚಿಯಾದ ಉಪ್ಪಿಟ್ಟು ಇಳಿಸಲು ಏನಿಲ್ಲವೆಂದರೂ ಮುಕ್ಕಾಲು ಗಂಟೆ ಬೇಕೇಬೇಕು!

ನಂತರ ಕಾಫಿ ಅಥವಾ ಟೀ ಮಾಡಿ ಅಡುಗೆ ಮನೆ ಸ್ವಚ್ಛಗೊಳಿಸಲು ಇನ್ನರ್ಧ ಗಂಟೆಯಾದರೂ ಬೇಕು, ಅಂದ್ರೆ ಬೇಗ ಬೇಗ ಮಾಡಿದ್ರೂ ಸರಾಸರಿ ಒಂದು ಕಾಲು ಘಂಟೆ, ಇನ್ನು ಹುಷಾರಿಲ್ಲದ ಸಮಯದಲ್ಲಿ ಮಾಡಿದ್ರೆ ಅದಕ್ಕಿಂತಲೂ ನಿಧಾನ!

ಆಮೇಲೆ ಮಧ್ಯಾಹ್ನಕ್ಕೆ ಸಿಂಪಲ್ ಅನ್ನ ಸಾರು ಅಂದ್ರೂ ಅದಕ್ಕೂ ತಯಾರಿ ಬೇಕು, ಹೀಗೆ ದಿನವಿಡಿ ಅಡುಗೆ ಮನೆಯ ಗಿರಣಿ ನಡೆದೇ ಇರುತ್ತದೆ! ಇನ್ನೂ ಆರೋಗ್ಯದಿಂದ ಇದ್ದಾಗಂತೂ ಸರಿಯೇ, ಕೆಲಸ ಮಾಡುವ ತಾಯಿಯ ಮುಖದಲ್ಲಿ ಆಯಾಸ ಕಂಡರೂ ಮಕ್ಕಳು ಕೇಳುವುದಿಲ್ಲ...!

ಸ್ನೇಹ ಲೋಕ

ಸಾಕಾಯ್ತಾ,ಅಮ್ಮಾ...ಅಂತ ಕೇಳಿದರೆ ಕೆಲಸ ಅವರು ಹೊರಬೇಕಾಗುತ್ತದೆ ಅಲ್ವೇ!

ಇಷ್ಟೇ ಅಲ್ವಾ ಮಾಡು ಎನ್ನುವವರಿಗೆ ಅದರ ದು:ಖ ಗೊತ್ತಿರುವುದಿಲ್ಲ, ಕಾರಣ ಅವರಿಗೆ ಅಡುಗೆ ಬರುತ್ತಿರುವುದಿಲ್ಲ, ಹೀಗಾಗಿ ಒಂದು ಅಡುಗೆ, ತಿಂಡಿ ಮಾಡಿದ ಮೇಲೆ ಮುಖ್ಯವಾಗಿ ಅಡುಗೆ ಮನೆ ಸ್ವಚ್ಛಗೊಳಿಸಲು ಎಷ್ಟೋ ಸಮಯ ತೆಗೆದುಕೊಳ್ಳುತ್ತದೆ ಎಂದು ಅರಿವಿಲ್ಲದೆ ಇರುತ್ತಾರೆ! ಅಕಸ್ಮಾತ್ ಗೊತ್ತಿದ್ದರೂ ನಮಗೇ ಏನೂ ಗೊತ್ತೇ ಇಲ್ಲ ಎನ್ನುವ ಹಾಗೆ ಕುಳಿತುಕೊಳ್ಳುವ ಸ್ವಭಾವವೂ ಕೂಡ!

ಮನೆಯಲ್ಲಿ ಹೆಣ್ಣು ಮಾಡುವ ಕೆಲಸ ಸಣ್ಣ, ಪುಣ್ಣ ಕೆಲಸವೇ ನಿಜ , ಆದರೆ ಅಂತಹ ಕೆಲಸ ದಿನವಿಡಿ ಇರುತ್ತವೆ, ಇನ್ನು ಹುಷಾರಿಲ್ಲದಾಗ ಆ ಕೆಲಸಗಳು ದೇಹಕ್ಕೆ, ಮನಸ್ಸಿಗೆ ಎರಡಕ್ಕೂ ಭಾರವಾಗುತ್ತವೆ!

ಹೀಗಾಗಿ ದಿನವೂ ಕಾಳಜಿ ತೆಗೆದುಕೊಳ್ಳುವ ಹೆಂಡತಿ,ತಾಯಿ, ತಂಗಿ, ಅಕ್ಕ ಯಾರೇ ಇರಲಿ ಒಂದೆರಡು ದಿನ ಅವರು ಸಾಕಾಗಿದೆ ಅಂದರೆ ಅವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿ ನೀವು ಆ ಕೆಲಸದ ಜವಬ್ದಾರಿ ವಹಿಸಿಕೊಳ್ಳಿ, ಪ್ರೀತಿಯಿಂದ ಕಾಳಜಿ ತೆಗೆದುಕೊಳ್ಳಿ!

ನೀವು ಹೊರಗಡೆಯಿಂದ ತಿಂಡಿ ತಂದು ಕೊಟ್ಟರೂ ಸಹ ಹೆಂಡತಿಗೆ ನೀವು ಆಕೆಯ ಕಡೆಗೆ ಗಮನ ಕೊಟ್ಟಿದ್ದೀರಿ ಅನಿಸುತ್ತದೆ, ಆರೋಗ್ಯ ಬೇಗ ಸುಧಾರಿಸುತ್ತದೆ! ಮಾನಸಿಕ ಸಮಾಧಾನ ದೇಹದ ಆರೋಗ್ಯಕ್ಕೆ ಬೇಗ ಸುಧಾರಣೆ ತರುತ್ತದೆ!

ಜೀವನ ಇಷ್ಟೇ, ಗಂಡ ಆಫೀಸಿನಿಂದ ಬಂದರೆ ಹೆಂಡತಿ ಆತನ ಬಗ್ಗೆ ಗಮನ ಕೊಡಬೇಕು, ಹೆಂಡತಿ ತುಂಬಾ ದಣಿದರೆ ಆಕೆಗೆ ವಿಶ್ರಾಂತಿ ಕೊಟ್ಟು ನೀವು ಕಾಳಜಿ ತೋರಬೇಕು ಅಷ್ಟೇ!


ಒಬ್ಬರು ಯಾವಾಗಲೂ ಸ್ವಚ್ಛ ಮಾಡುವುದು, ಇನ್ನೊಬ್ಬರು ಹರಡುವುದು ಅಂದರೆ ಜೀವನದ ಹಾದಿ ತುಂಬಾ ಕಷ್ಟ!

ಮನೆಯಲ್ಲಿ ಹೆಂಡತಿಗೆ ಬೇಕಾದ ಸಹಾಯ ಮಾಡಿಕೊಟ್ಟು ಜೊತೆಗೆ ನಗು ನಗುತ್ತಾ ಮಾತನಾಡಿದರೆ ಸಾಕು ಇಬ್ಬರ ಮನಸ್ಸು ಮುದಗೊಳ್ಳುತ್ತದೆ! ಮನೆಯನ್ನು ಸ್ವಚ್ಛವಾಗಿ ಇಡುವುದು ಆ ಮನೆಯ ಪ್ರತಿಯೊಬ್ಬ ಸದಸ್ಯರ ಹೊಣೆ, ಇದೊಂದು ನಾವು ತಿಳಿದು ಕೊಳ್ಳುವ ಸಾಮಾನ್ಯ ಜ್ಞಾನ ಕೂಡ!

ಆಗ ಇನ್ನೂ ಹೆಚ್ಚು ಕೆಲಸ, ಅಡುಗೆ ಮಾಡಲು ಆ ಮನೆಯ ಒಡತಿಗೆ ಹುಮ್ಮಸ್ಸು ಬರುತ್ತದೆ !

ಪ್ರೇರಣೆ ಯಾವಾಗಲೂ ಕುಟುಂಬದ ಸದಸ್ಯರು, ಮಕ್ಕಳು, ಜೀವನ ಸಂಗಾತಿಯಿಂದಲೇ ಸಿಗಬೇಕು !

ಸೆಲ್ಫ್ ರೆಸ್ಪೆಕ್ಟ್ ಎಲ್ಲರಿಗೂ ಇಷ್ಟ, ಆದರೆ ಅದರ ಜೊತೆಗೆ ನಮ್ಮವರ ಬೇರೆಯವರ ರೆಸ್ಪೆಕ್ಟ್ ಅಷ್ಟೇ ಮುಖ್ಯ!



## ಒಂದು ಕೈ, ಸಾವಿರ ಕನಸು, ಚಿನ್ನದ ಗೆಲುವು



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಪದವಿಯ ಕಾಗದವಿಲ್ಲದೆ ಸಾವಿರಾರು ಜೀವಗಳನ್ನು ಉಳಿಸಬಹುದು. ಆಧುನಿಕ ಉಪಕರಣಗಳಿಲ್ಲದೆ ತಾಯಿಯ ಕಣ್ಣೀರನ್ನು ಒರೆಸಬಹುದು. ಇದಕ್ಕೆ ಸಾಕ್ಷಿ ಕರ್ನಾಟಕದ ಪಾವಗಡದ ಸೂಲಗಿತ್ತಿ ನರಸಮ್ಮ. ಅಕ್ಷರ ಕಲಿಯದಿದ್ದರೂ ಮಾನವೀಯತೆಯ ಮಹಾಪಾಠವನ್ನು ಜಗತ್ತಿಗೆ ಕಲಿಸಿದ ಮಹಾತಾಯಿ ಅವರು.

ಅಜ್ಜಿಯಿಂದ ಹೆರಿಗೆ ಕಲೆಯನ್ನು ಕಲಿತ ನರಸಮ್ಮ ಅವರು ಏಳು ದಶಕಗಳ ಕಾಲ ದೂರದ ಹಳ್ಳಿಗಳಲ್ಲಿ ಸಂಚರಿಸಿದರು. ರಾತ್ರಿ–ಹಗಲು, ಮಳೆ–ಬಿಸಿಲಿನ ಭೇದವಿಲ್ಲ. ಆಸ್ಪತ್ರೆ ತಲುಪಲಾಗದ ತಾಯಂದಿರ ಬಳಿಗೆ ಕಾಲ್ನಡಿಗೆಯಲ್ಲಿ ತೆರಳಿ ಆಸರೆಯಾದರು. "ಸೂಲಗಿತ್ತಿ" ಎಂಬ ಪದಕ್ಕೆ ಅವರು ಹೊಸ ಘನತೆ ತಂದುಕೊಟ್ಟರು. ಸುಮಾರು 15,000 ಮಕ್ಕಳನ್ನು ತಮ್ಮ ಕೈಯಿಂದ ಈ ಭೂಮಿಗೆ ಸ್ವಾಗತಿಸಿದರು. ಒಂದೇ ಒಂದು ರೂಪಾಯಿ ಕೇಳಲಿಲ್ಲ. "ಸೇವೆ ಮಾಡುವುದು ನನ್ನ ಧರ್ಮ, ವೃತ್ತಿಯಲ್ಲ" ಎಂಬುದು ಅವರ ದೃಢ ನಂಬಿಕೆಯಾಗಿತ್ತು.




ಸ್ಫೂರ್ತಿ ಸುಧೆ - 85

ಅನುಭವೇ ಅವರ ವೈದ್ಯಕೀಯ ಪಠ್ಯ. ತಾಯಿಯ ಹೊಟ್ಟೆಯನ್ನು ಸ್ಪರ್ಶಿಸಿ ಮಗುವಿನ ಸ್ಥಾನವನ್ನು ನಿಖರವಾಗಿ ಹೇಳುವ ಅಪೂರ್ವ ಕೌಶಲ್ಯ ಅವರದಾಗಿತ್ತು. ಅವರ ಕೈಯೇ ಸ್ಟೆತಸ್ಕೋಪ್, ಅವರ ಪ್ರೀತಿಯೇ ಮದ್ದು. ಈ ನಿಸ್ವಾರ್ಥ ಸೇವೆಗೆ 2014ರಲ್ಲಿ ತುಮಕೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತು. 2018ರಲ್ಲಿ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ನಿಧನರಾಗುವ ಮೊದಲು ತಮ್ಮ ಮಗಳೂ ಸೇರಿದಂತೆ 180 ಮಹಿಳೆಯರಿಗೆ ಈ ಪವಿತ್ರ ಕಲೆಯನ್ನು ಕಲಿಸಿ ಹೋದರು. ನರಸಮ್ಮ ಅವರ ಬದುಕು ಹೇಳುವುದು ಒಂದೇ ಸತ್ಯ. ದೊಡ್ಡ ಸಾಧನೆಗೆ ದೊಡ್ಡ ಪದವಿ ಅಗತ್ಯವಿಲ್ಲ. ದೊಡ್ಡ ಹೃದಯವಿದ್ದರೆ ಸಾಕು. ಸೇವೆಯೇ ನಿಜವಾದ ಆರಾಧನೆ.

# ಲೆಕ್ಕಾಚಾರದ ಜೀವನ



| ಪುಷ್ಪ ಪ್ರಸಾದ್

ಒಲವೇ ಜೀವನ ಲೆಕ್ಕಚಾರ ಅಲ್ಲ ಬದುಕೇ ಜೀವನದ ಲೆಕ್ಕಚಾರ ಆಗ್ಬಿಟ್ಟಿದೆ ಇಂದು. ನಮ್ಮೆಲ್ಲರ ಜೀವನ ಲೆಕ್ಕಚಾರದ ಮೇಲೆಯೇ ನಿಂತಿದೆ ಎಂದರೆ ತಪ್ಪಾಗಲಾರದು.

ನಾನು ನನ್ನದು ಅನ್ನುವ ಲೆಕ್ಕಾಚಾರದೊಳಗಡೆ ಬದುಕು ನಮ್ಮೊಳಗಿನ ಪ್ರತಿಭೆಯನ್ನು ಹುಡುಕುವ ಕಲೆ, ಹೊಸತನ್ನು ಅನ್ವೇಷಿಸಿ, ಅನುಕರಿಸುವ ವಿಜ್ಞಾನವಾಗಿದೆ ಆದ್ರೆ ನಾವೆಲ್ಲರೂ ಬದುಕನ್ನ ವಾಣಿಜ್ಯ ಮಾಡಿಕೊಂಡು, ಕೊಟ್ಟು ತೆಗೆದುಕೊಳ್ಳುವ ವ್ಯವಹಾರಕ್ಕೆ ಹೊಂದಿಕೊಂಡಿದ್ದೇವೆ. 2+2 =4 ಅಂತ ಅಷ್ಟೇ ಯೋಚನೆ ಮಾಡುತ್ತೇವೆ ಹೊರತು 3+1= 4 ಈ ತರನೂ ಆಗುತ್ತದೆ ಎಂದು ಒಪ್ಪಿಕೊಳ್ಳಲು ತಯಾರಿರುವುದಿಲ್ಲ. ನಮ್ಮೆಲ್ಲರ ಆಯ್ಕೆ, ನಿರ್ಧಾರಗಳು ನಮ್ಮ ಮೂಗಿನ ನೇರಕ್ಕೆ ಇರತ್ತವೆ, ಎಲ್ಲರಿಗೂ ಅವರು ಮಾಡಿದ್ದೆ ಸರಿ, ಅವರ ನಿರ್ಧಾರವೇ ನ್ಯಾಯಯುತವಾಗಿರುತ್ತವೆ ಎಂದುಕೊಳ್ಳುತ್ತೇವೆ.

ಇಟ್ಟಿಗೆಯಿಂದ ಗೋಡೆನೂ ಕಟ್ಟಬಹುದು, ಸೇತುವೆನೂ ಕಟ್ಟಬಹುದು, ಆದ್ರೆ ನಾವೆಲ್ಲ ಆಗಿರುವ ಸಣ್ಣ ಮನಸ್ಥಾಪಕ್ಕೆ ಆಡಿರುವ ಒಂದು ಮಾತನ್ನೆ ಇಟ್ಟುಕೊಂಡು ಸಂಬಂಧಗಳ ನಡುವೆ ಗೋಡೆ ಕಟ್ಟಿಬಿಡ್ತೀವಿ. ಅದೇ ಕ್ಷಮಿಸಿ ಅನ್ನುವ ಒಂದು ಪದ ಹೇಳುವುದರಿಂದ ಆಗಿರುವ ಎಷ್ಟೊ ಮನಸ್ಥಾಪಗಳ ನಡುವೆ ಮನಸುಗಳ ನಡುವೆ ಸೇತುವೆ ನಿರ್ಮಾಣವಾಗಿಬಿಡುತ್ತದೆ. ಒಂದು ಕ್ಷಮೆ ಕೇಳುವುದರಿಂದ ಯಾರೂ ಸೋಲುವುದಿಲ್ಲ ಹಾಗೂ ಒಂದುವೇಳೆ ಸೋಲುತ್ತೇವೆ ಎಂದಾದರೆ ಸೋಲುವುದಾದರೂ ಯಾರ ಮುಂದೆ? ನಮ್ಮನ್ನ ಅತಿಯಾಗಿ ಪ್ರೀತಿಸಿದವರ ಮುಂದೆ ಅಲ್ಲವೇ? ಅವರ ಮುಂದೆ ಗೆದ್ದು ಪಡೆದುಕೊಳ್ಳುವುದಾದರೂ ಏನಿದೆ? ಇನ್ನೂ ಕೆಲವರು ಅಂದುಕೊಳ್ಳುತ್ತೇವೆ ಬ್ರಾಂಡೆಡ್ ಬಟ್ಟೆಗಳನ್ನ, ವಸ್ತುಗಳನ್ನ, ತೆಗೆದುಕೊಂಡರೆ ಜೀವನ ಬ್ರಾಂಡೆಡ್ ಆಗಿರುತ್ತದೆ ಅಂತ, ಎಲ್ಲರೂ ನಮಗೆ ಬೆಲೆ ಕೊಡಬಹುದು ಅಂತ. ಪಾಪಸ್ ಕಳ್ಳಿ ಹೂ ಬೆಟ್ಟದ ಮೇಲೆಯೇ ಬಿಟ್ಟರೂ ಅದನ್ನ ದೇವರಿಗೆ ಮುಡಿಸುವುದಿಲ್ಲ, ಕಮಲ ಕೆಸರಲ್ಲೆ ಬಿಡುತ್ತದೆ ಆದರೂ ದೇವರಿಗೆ ಮುಡಿಸುತ್ತ?ವೆ. ನಾವು ಎಲ್ಲಿರುತ್ತೇವೆ, ಹೇಗೆ ಬದುಕುತ್ತಿದ್ದೇವೆ ಅನ್ನುವುದಕ್ಕಿಂತ ನಾವು ಎಲ್ಲಿದ್ದರೂ ನಮ್ಮತನ ಉಳಿಸಿಕೊಂಡಿದ್ದರೆ ಮಾತ್ರ ಬೆಲೆ ತಂತಾನೆ ಬರುತ್ತದೆ. ದೀಪ ಸುಡುತ್ತೆ ಕೈ ಹಾಕಬೇಡಿ ಅಂದರೂ ಹೇಗೆ ಸುಡುತ್ತೆ ನೋಡೋಣ ಅನ್ನುವ ಕುತೂಹಲ ಎಲ್ಲರಿಗೂ ಇದ್ದೇ ಇದೆ, ಹಾಗೆ ಪ್ರೀತಿ ಕೂಡ. ಪ್ರೀತಿಲಿ ನೋವು, ಮೋಸ, ಕಣ್ಣೀರು ಎಲ್ಲಾ ಇದೆ ಅಂತ ಗೊತ್ತಿದ್ರು ಪ್ರೀತಿ ಮಾಡ್ತಿವಿ. ಯಾರಾದ್ರು ನಮ್ಮಿಂದ ದೂರ ಹೋಗ್ತಾರೆ ಅಂದ್ರೆ ನಮ್ಮಲ್ಲಿ ಅವರಿಗೆ ಇಷ್ಟ ಆಗದೆ ಇರುವ ಯಾವುದೋ ಒಂದು ಗುಣದಿಂದಾನೆ ಅಲ್ವ? ನಮ್ಮಲ್ಲೆ ತಪ್ಪು ಇಟ್ಟುಕೊಂಡು ಬಿಟ್ಟು ಹೋದವರನ್ನ ಮಾತ್ರ ದೂರುತ್ತಾ ಇರುತ್ತೇವೆ ಅಷ್ಟೆ. ಹಾಳಾದ ಈ ಪ್ರೀತಿನೆ ಹೀಗೆ ಅನ್ಸುತ್ತೆ ಅಲ್ವಾ? ಜಗತ್ತಲ್ಲಿ ಎಷ್ಟೇ ಜನ ಹುಡುಗ/ಹುಡುಗಿ ಇದ್ರು ನಮಗೆ ಮಾತ್ರ ಮತ್ತೆ ಮತ್ತೆ ಪ್ರೀತಿ ಹುಟ್ಟೋದು ನಮ್ಮನ್ನ ಬಿಟ್ಟು ಹೋದವರ ಮೇಲೆನೆ ಅಲ್ವಾ? ಹೌದು ನಾವೆಲ್ಲರೂ ತುಂಬಾ ಬ್ಯುಸಿಯಾಗಿರ್ತೀವಿ, ಯಾವುದ್ರಲ್ಲಿ? ಮನೆಯಲ್ಲಿ ಅಮ್ಮ ಸೀರಿಯಲ್ಗಳಲ್ಲಿ, ಅಪ್ಪ ಪಾರ್ಟಿಗಳಲ್ಲಿ, ಮಕ್ಕಳು ಮೊಬೈಲ್ ಗೇಮಲ್ಲಿ, ಇನ್ನೂ 14–18 ವರ್ಷದ ಓದುವ ವಯಸ್ಸಿನ ಮಕ್ಕಳು ಪ್ರೀತಿ–ಪ್ರೇಮದಲ್ಲಿ, 30–40 ವಯಸ್ಸಿನವರು ಮದುವೆ ಆಗಿ ಈಗಲೇ ಮಕ್ಕಳು ಮಾಡಿಕೊಳ್ಳುವುದು ಸರಿಯೇ ಅಥವಾ ಈಗಲೇ ಬೇಡವೋ ಅನ್ನುವ ಯೋಚನೆಯಲ್ಲಿ, ಇದನ್ನೆಲ್ಲಾ ಮಾಡಬೇಕಾಗಿರುವ ಸರಿಯಾದ ವಯಸ್ಸಿನವರು ಅಂದರೆ 23–30 ಅವರು ದುಡಿಮೆ, ದುಡ್ಡು ಮಾಡುವುದರಲ್ಲಿ, ಗೊನೆ ಬಿಟ್ಟ ಬಾಳೆನೂ ಬಾಗುತ್ತದೆ, ತೆನೆ ಬಿಟ್ಟ ಪೈರು ಕೂಡ ಬಾಗುತ್ತದೆ, ಆದರೆ ಈ ಮನುಷ್ಯ ಜೀವ ಮಾತ್ರ ನಾನು ನನ್ನದು ಅನ್ನುವ ಅಹಂ ನಲ್ಲಿ ಬೀಗುತ್ತಿದ್ದಾನೆ. ಈ ಲೋಕವೇ ಹುಚ್ಚು ಅದರಲ್ಲೂ ನಮಗೆ ಸ್ವಲ್ಪ ಹೆಚ್ಚು ಅನ್ನುವುದೇ ಮರ್ತು, ಇನ್ನೊಬ್ಬರ ತಪ್ಪುಗಳನ್ನ ಎತ್ತಿ ತೋರಿಸುವುದರಲ್ಲಿಯೇ ಬದುಕು ಕಳೆದು ಹೋಗಿರುತ್ತದೆ. ಜಗತ್ತಿನಲ್ಲಿ ಬಿಟ್ಟಿಯಾಗಿ ಸಿಗುವುದು ಅಂದರೆ ಭೋದನೆ ಒಂದೇ. ಸುಳ್ಳು ಅನ್ಸಿದ್ರೆ ನೀವು ಹತ್ತು ಜನರ ಹತ್ತಿರ ಸಹಾಯ ಕೇಳಿ ಒಬ್ಬರು ಬರುವುದಿಲ್ಲ ಸಹಾಯಕ್ಕೆ, ಅದೇ ಒಬ್ಬರ ಹತ್ತಿರ ಸಲಹೆ ಕೇಳಿ ಬೇಡ ಅಂದ್ರು ಹತ್ತು ಜನ ಬರುತ್ತಾರೆ ಬಿಟ್ಟಿ ಸಲಹೆ ಕೊಡುವುದಕ್ಕೆ. ವಿದ್ಯೆ ಜೊತೆ ವಿನಯವೂ ಇದ್ದಾಗಲೇ ವಿದ್ಯಾರ್ಥಿಗೆ ಶೋಭೆ. ಆದ್ರೆ ನಾಲ್ಕಾರು ಊರು ಸುತ್ಕೊಂಡು, ಒಂದೆರಡು ಡಿಗ್ರಿ ತೆಗೆದುಕೂಂಡಿದ್ರೆ ಸಾಕು ಪ್ರಪಂಚವನ್ನೆ ಗೆದ್ದಿದಿವಿ ಅನ್ನುವ ಭ್ರಮೆಲಿ ಬದುಕ್ತಿರ್ತಿವಿ. ನಾವು ಎಷ್ಟು ಓದಿದಿವಿ ಎಂಬುದಕ್ಕಿಂತ ನಾವು ಓದಿರುವ ವಿದ್ಯೆ ನಮಗೆಷ್ಟು ಸಂಸ್ಕಾರ ಕೊಟ್ಟಿದೆ ಎಂಬುದು ಮುಖ್ಯ. ಎಲ್ಲಾ ಕಡೆ ಬೀಗುವುದಲ್ಲ ಸಂಸ್ಕಾರ, ಬಲಹೀನರ ಎದುರು ಕೂಡ ಬಾಗುವುದೇ ಸಂಸ್ಕಾರ. ಈಗ ನಾನೇನಾದರೂ ಈ ರೀತಿ ಬರೆದಿರುವುದು ಸರಿ ಅಂತ ನೀವೆನು ಒಪ್ಪಿಕೊಳ್ಳಲೇ ಬೇಕಿಲ್ಲ ಅಲ್ವ? ನಮಗೆ ಗೊತ್ತು ನಾವು ಮಾಡುತ್ತಿರುವ ಕೆಲಸ, ನಮ್ಮ ನಿರ್ಧಾರ ಸರಿ ಇದೆ ಅಂತ. ಹಾಗೆ ಎಲ್ಲರಿಗೂ ಕೂಡ ಅವರು ಮಾಡಿದ್ದೆ ಸರಿ ಇರತ್ತದೆ ಕೂಡ. ಇನ್ನೊಬ್ಬರ ನಿರ್ಧಾರವನ್ನ ನಮ್ಮ ದೃಷ್ಟಿ ಕೋನದಲ್ಲಿ ನಿಂತು ನಿರ್ಣಯಿಸುವ ಬದಲು ಬೇರೆಯವರ ನಿರ್ಧಾರವನ್ನು ಅವರ ಜಾಗದಲ್ಲಿ ನಿಂತು ಸ್ವಲ್ಪ ನೋಡಬೇಕಲ್ಲವೇ? ನಿಮಗೂ ಇದೇ ತರ ಪ್ರಶ್ನೆ ಮೂಡಿರಬೇಕಲ್ಲವೆ?







Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,